# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 2 ಫೆಬ್ರವರಿ 2006

ಕರ್ನಾಟಕ ಲಲಿತಾ ಕಲಾ ಅಕಾಡೆಮಿ

ಮತ್ತು

ಮೈಸೂರು ಅಸೋಸಿಯೇಶನ್, ಮುಂಬಯಿಯ

ಜಂಟಿ ಆಶ್ರಯದಲ್ಲಿ ಕರ್ನಾಟಕದ ಯುವ ಕಲಾವಿದರ ಚಿತ್ರ ಕಲಾ ಪ್ರದರ್ಶನ



Rs. 5/-

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

# ಡಿವಿಜಿ ಸಂಸ್ಮರಣೆ ಕಾರ್ಯಕ್ರಮ




ಅಸೋಸಿಯೇಷನ್‌ನಲ್ಲಿ ಜನವರಿ 7, 8ರಂದು ನಡೆದ ಡಿ.ವಿ.ಜಿ. ಸ್ಮರಣೆ ಕಾರ್ಯಕ್ರಮದ ಉದ್ಘಾಟನೆಯ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀಮತಿ ಗೀತಾ ನಾಗಭೂಷಣ ಅವರು ದೀಪ ಪ್ರಜ್ವಲಿಸಿದರು

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಮೈಸೂರು ಅಸೋಸಿಯೇಶನ್ ಮುಂಬಯಿ ಮತ್ತು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಡಿ.ವಿ.ಜಿ. ಸಂಸ್ಮರಣೆಯ ಮುಖ್ಯ ಉಪನ್ಯಾಸವನ್ನು ಪ್ರೊ. ಎಂ. ಎಚ್. ಕೃಷ್ಣಯ್ಯ ಪ್ರಸ್ತುತ ಪಡಿಸುತ್ತಾ ಅವರಿಗೆ ಗಹನವಾದ ತತ್ವಗಳನ್ನು ಬಾಳಿನೊಳಗಿನ ಸಂಘರ್ಷ ದ್ವಂದ್ವಗಳನ್ನು ಸರಳ ಆದರೂ ಪರಿಣಾಮಕಾರಿಯಾಗಿ ಹೇಳುವ ಕಲೆಯು ಡಿ.ವಿ.ಜಿಯವರಿಗೆ ಕರಗತವಾಗಿತ್ತು. 'ವಿರಕ್ತರಾಷ್ಟ್ರಕ' ಎಂಬ ವಿಶೇಷಣವು ಅವರಿಗೆ ಚೆನ್ನಾಗಿ ಹೊಂದಿಕೆಯಾಗುತ್ತದೆ ಎಂದು ವಿಶ್ಲೇಷಿಸಿದರು. ಇನ್ನೊಬ್ಬ ಉಪನ್ಯಾಸಕರಾಗಿದ್ದ ಬೆಂಗಳೂರಿನ ಎಸ್. ಆರ್. ರಾಮಸ್ವಾಮಿಯವರು ಡಿ.ವಿ.ಜಿ.ಯವರ ಸಾರ್ವಜನಿಕ ಜೀವನದ ಬಗೆಗಿನ ಮಾಹಿತಿಗಳನ್ನು ನೀಡಿದರು. ಪತ್ರಿಕೋದ್ಯಮಿಯಾಗಿ, ಶಾಸಕರಾಗಿ, ಅನ್ಯಾನ್ಯ ಸಂಘ ಸಂಸ್ಥೆಗಳ ಸಂಸ್ಥಾಪಕ ಹಾಗೂ ಸಂಘಟಕರಾಗಿ ಡಿ.ವಿ.ಜಿ.ಯವರ ಕಾರ್ಯವೈಖರಿಗಳ ಸಮಗ್ರ ಪರಿಚಯವನ್ನು ಮಾಡಿಕೊಟ್ಟರು.



ಡಿ.ವಿ.ಜಿ. ಸಂಸ್ಮರಣೆ ಕಾರ್ಯಕ್ರಮ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರು: ಪ್ರೊ. ಡಾ. ಕೆ. ರಘುನಾಥ್, ಶ್ರೀ ಎಸ್. ಆರ್. ರಾಮಸ್ವಾಮಿ, ಪ್ರೊ. ಡಾ. ಪಾದೇಕಲ್ ವಿಷ್ಣು ಭಟ್, ಪ್ರೊ. ಡಾ. ತಾಳ್ತಜೆ ವಸಂತಕುಮಾರ್, ಶ್ರೀಮತಿ ಗೀತಾ ನಾಗಭೂಷಣ, ಪ್ರೊ. ಎಂ. ಎಚ್. ಕೃಷ್ಣಯ್ಯ, ಶ್ರೀ ಎಸ್. ದೊರೆಸ್ವಾಮಿ

ಇನ್ನೊಬ್ಬ ಉಪನ್ಯಾಸಕರಾಗಿ ಉಡುಪಿಯ ಡಾ. ಪಾದೇಕಲ್ ವಿಷ್ಣು ಭಟ್‌ರು ಡಿ.ವಿ.ಜಿ.ಯವರ 'ಜೀವನ ಧರ್ಮ ಯೋಗ' ಕೃತಿಯ ಸಂರಚನೆ ವರ್ಗೀಕರಣ ವಿಧಾನ ಹಾಗೂ ವೈಶಿಷ್ಟ್ಯಗಳನ್ನು ಉದಾಹರಣೆಗಳೊಂದಿಗೆ ವಿವರಿಸಿದರು.

ಮುಂಬಯಿಯ ಡಾ. ರಘುನಾಥ್ ಅವರು ಡಿ.ವಿ.ಜಿ.ಯವರ 'ಜ್ಞಾಪಕ ಚಿತ್ರ ಶಾಲೆ' ಯ ಹಲವು ಒಳ ಹೊರ ಅಂಗಣಗಳ ರೂಪು ರೇಷೆಗಳನ್ನು ನಿರೂಪಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ಗೀತಾ ನಾಗಭೂಷಣ ಅವರು ''ಮಹಿಳಾ ಸಾಹಿತಿಗಳಿಗೆ ಧ್ವನಿ ನೀಡುವ ಅವರ ಸಾಧನೆಗಳನ್ನು ಸಾಹಿತ್ಯ ಚರಿತ್ರೆಗಳಲ್ಲಿ ಗುರುತಿಸುವ ಕೆಲಸಗಳು ಅಗತ್ಯವಾಗಿದೆ ಹಾಗೂ ಡಿ.ವಿ.ಜಿ.ಯವರ ಬರಹಗಳ ಮರು ಮುದ್ರಣ ಮತ್ತು ಮೌಲ್ಯಮಾಪನಗಳು ನಡೆಯಬೇಕಾಗಿದೆ '' ಎಂದರು.

ಮೈಸೂರು ಅಸೋಸಿಯೇಶನಿನ ನೇಸರು ತಿಂಗಳೋಲೆಯ ಡಿ.ವಿ.ಜಿ. ವಿಶೇಷ ಸಂಚಿಕೆಯನ್ನು ಗೀತಾ ನಾಗಭೂಷಣ ಅವರು ಬಿಡುಗಡೆಗೊಳಿಸಿದರು.


ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರರು ''ಕನ್ನಡ ಸಾಹಿತ್ಯದ ಶಿಖರ ಸ್ಥಾನದಲ್ಲಿರುವ ಡಿ.ವಿ.ಜಿ.ಯವರ ಸಂಸ್ಮರಣೆಯು ಕನ್ನಡಿಗರೆಲ್ಲರಿಗೂ ಉಪಾದೇಯವೇ ಆಗಿದೆ. ಪರಂಪರೆ ಮತ್ತು ಆಧುನಿಕತೆಗಳನ್ನು ಬೆರೆಸಿಕೊಂಡು ಬದುಕಿದ ಅವರಂತವರ ಮಾದರಿಗಳು ಅನುಸರಣ ಯೋಗ್ಯವಾಗಿದೆ'' ಎಂದರು.

ಅಸೋಸಿಯೇಶನ್‌ನ ಅಧ್ಯಕ್ಷರಾದ ಹಾಗೂ ಡಿ.ವಿ.ಜಿ.ಯವರ ತಮ್ಮನ ಮಕ್ಕಳಾದ ಶ್ರೀ ಎಸ್. ದೊರೆಸ್ವಾಮಿಯವರು ಸಮಾರಂಭದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.




ಮುಖ್ಯ ಉಪನ್ಯಾಸಕರಾದ ಪ್ರೊ. ಕೃಷ್ಣಯ್ಯನವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ.

# ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಮತ್ತು ಮೈಸೂರು ಅಸೋಸಿಯೇಶನ್, ಮುಂಬಯಿಯ ಜಂಟಿ ಆಶ್ರಯದಲ್ಲಿ ಕರ್ನಾಟಕದ ಯುವ ಕಲಾವಿದರ ಚಿತ್ರ ಕಲಾ ಪ್ರದರ್ಶನದ ಪ್ರಮುಖ ದೃಶ್ಯಗಳು



ಜ. 24ರಂದು ನೆಹರೂ ಸೆಂಟರಿನಲ್ಲಿ ನಡೆದ ಚಿತ್ರಕಲಾ ಪ್ರದರ್ಶನದ ಉದ್ಘಾಟನೆಯನ್ನು ಹೆಸರಾಂತ ಕಲಾವಿದೆ ಶ್ರೀಮತಿ ಪ್ರಫುಲ್ಲಾ ದಹಾನುಕರ್ ಅವರು ಉದ್ಘಾಟಿಸಿ ಪ್ರದರ್ಶನವನ್ನು ವೀಕ್ಷಿಸುತ್ತಿದ್ದಾರೆ.



ಜ. 24ರಂದು ಅಸೋಸಿಯೇಶನ್‌ನಲ್ಲಿ ಚಿತ್ರಕಲಾ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದ ಹೆಸರಾಂತ ಕಲಾವಿದ ಶ್ರೀ ವಿಲಾಸ್ ಶಿಂದೆಯವರು ಪ್ರದರ್ಶನವನ್ನು ವೀಕ್ಷಿಸುತ್ತಿದ್ದಾರೆ.



ಮುಖ್ಯ ಅತಿಥಿಗಳಾದ ಶ್ರೀ ವಿಲಾಸ್ ಶಿಂದೆಯವರಿಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪರವಾಗಿ ಚಿತ್ರಕಲೆಯೊಂದನ್ನು ಗೌರವಾರ್ಥವಾಗಿ ಶ್ರೀ ಮುನಿರಾಜುರವರು ಸಮರ್ಪಿಸುತ್ತಿರುವುದು.

**Matrimonial**

Wanted Smartha Kannada Brahmin Boy for 22 yrs girl, Kashyapa gotra, Makara Rashi, Uttarashada Nakshatra, B.Com. (Gold Medalist Specialised in Foreign trade), working in Citi Finance as Personal Loan Officer, Slim Fair, Hyderabad based.
Father: Industrialist.
Contact: Sudha Rao
Tel.: 93223 69936 / 2849 2323

# ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರು

- ಬಿ.ನಾಗಭೂಷಣ್.

ಭಾರತೀಯ ಸಂಗೀತವು ವೇದಗಳ ಕಾಲದಿಂದಲೂ, ಭಾರತೀಯ ಸಂಗೀತವೆಂದೇ ಪ್ರಸಿದ್ಧಿಯಾಗಿತ್ತು. 12ನೇ ಶತಮಾನದಲ್ಲಿ ಮೊಗಲರ ಆಕ್ರಮಣದಿಂದಾಗಿ ಭಾರತವು ಉತ್ತರ ಮತ್ತು ದಕ್ಷಿಣವೆಂದು ಎರಡು ಭಾಗವಾಯಿತು. ಮೊಗಲರು ತಂದ ಸಂಗೀತ, ಪರ್ಶಿಯನ್ ಸಂಗೀತ ಉತ್ತರದೆಲ್ಲೆಲ್ಲಾ ಮೊಗಲ ಆಸ್ಥಾನದಲ್ಲಿ ಪ್ರಸಿದ್ಧಿಯಾಗಿ ಉತ್ತರಾದಿಯಾಯಿತು. ದಕ್ಷಿಣದಲ್ಲಿ ಅಂದು ಪ್ರಚಲಿತದಲ್ಲಿದ್ದ ಸಂಗೀತಕ್ಕೆ ದಕ್ಷಿಣಾದಿಯೆಂದು ಕರೆದರು.

ದಕ್ಷಿಣ ಭಾರತದಲ್ಲಿ ಸಂಗೀತವು ಯಾವುದೇ ಒಂದು ನಿರ್ದಿಷ್ಟವಾದ ನೆಲೆಯಿಲ್ಲದೆ ಆಯಾ ಪ್ರಾಂತ್ಯಗಳ, ಭಾಷೆಗಳ ಪ್ರಭಾವಕ್ಕೆ ಒಳಗಾಗಿ ವಿವಿಧ ರೀತಿಯಲ್ಲಿ ಬಳಕೆಯಲ್ಲಿದ್ದಿತು. ಕರ್ನಾಟಕದಲ್ಲಿ ಆಗ ಪ್ರಚಲಿತದಲ್ಲಿದ್ದ ವಚನಗಳು, ಕೇರಳದ ಜಾನಪದಗಳು ತಮ್ಮದೇ ಆದ ರೀತಿಯಲ್ಲಿ ಜನಪ್ರಿಯತೆಯನ್ನು ಪಡೆದುಕೊಂಡಿತ್ತು. ಸುಪ್ರಸಿದ್ಧ ಸಂಗೀತ ಶಾಸ್ತ್ರಜ್ಞ ಡಾ. ಸತ್ಯನಾರಾಯಣರವರು ಹೇಳುವಂತೆ ಇದೇ ದಕ್ಷಿಣದಲ್ಲಿ 4000ಕ್ಕೂ ಹೆಚ್ಚು ರಾಗಗಳು, 1000ಕ್ಕೂ ಹೆಚ್ಚು ತಾಳಗಳು ಪ್ರಚಲಿತದಲ್ಲಿದ್ದುವು. ಸಂಗೀತವು ಯಾವುದೇ ಒಂದು ನಿರ್ದಿಷ್ಟ ಸ್ವರೂಪದಿಂದ ಸಂಚರಿಸುತ್ತಿರಲಿಲ್ಲ.

ಇಂತಹ ಸಮಯದಲ್ಲಿ ಹರಿದಾಸ ಸಂಪ್ರದಾಯದ ಆದ್ಯಪ್ರವರ್ತಕರಾದ ಶ್ರೀ ಶ್ರೀಪಾದರಾಯರು ಮತ್ತು ಅವರ ಶಿಷ್ಯರಾದ ಶ್ರೀ ವ್ಯಾಸರಾಯರು ಕನ್ನಡದಲ್ಲಿ ದೇವರನಾಮಗಳನ್ನು ರಚಿಸಿ ಮಠದಲ್ಲಿ ಹಾಡಿಸುತ್ತಿದ್ದರು. ಶ್ರೀ ವ್ಯಾಸರಾಯರ ಕಾಲಕ್ಕೆ ಬಂದ ಶ್ರೀ ಪುರಂದರದಾಸರು ಅವರ ಗುರುಗಳಾದ ಶ್ರೀ ವ್ಯಾಸರಾಯರ ಆದೇಶದಂತೆ ಅಂದು ಬಳಕೆಯಲ್ಲಿದ್ದ ವಿವಿಧ ರೀತಿಯ ಸಂಗೀತ ಪದ್ಧತಿಗಳನ್ನೆಲ್ಲಾ ಕ್ರೋಢೀಕರಿಸಿ ಒಂದು ವ್ಯವಸ್ಥಿತ ರೀತಿಯ ಪದ್ಧತಿಯನ್ನು ಜಾರಿಗೆ ತಂದರು. ಜನ ಸಾಮಾನ್ಯರೂ ಕಲಿಯಲು ಅವಕಾಶವಾಗುವಂತೆ ಶ್ರೀ ಪುರಂದರದಾಸರು ಸ್ವರಾವಳಿಗಳನ್ನು ರಚಿಸಿದರು. ಸರಳೆವರಸೆಗಳು, ಜಂಟಿವರಸೆಗಳು, ಅಲಂಕಾರ ವರಸೆಗಳು, ಪಿಳ್ಳಾರಿ ಗೀತೆಗಳು, ಮುಂತಾದುವನ್ನು ರಚಿಸಿ ಪಠ್ಯಕ್ರಮವನ್ನು ಹಾಕಿಕೊಟ್ಟರು. ಇಂದಿಗೂ ಈ ಪದ್ಧತಿಯನ್ನು ಕರ್ನಾಟಕ ಸಂಗೀತ ಕಲಿಯುವವರೆಲ್ಲ ಅನುಸರಿಸುತ್ತಿದ್ದಾರೆ. ಅಂದಿನ ದಿನಗಳಲ್ಲಿ ತ್ರಿಪದಿಗಳು, ವಚನಗಳು ಇದ್ದುವು. ಸಾಹಿತ್ಯ ಕೇವಲ 3-4 ಸಾಲುಗಳಿಗೆ ಸೀಮಿತವಾಗಿತ್ತು. ಶ್ರೀ ಪುರಂದರದಾಸರು ಪಲ್ಲವಿ, ಅನುಪಲ್ಲವಿ, ಚರಣಗಳು ಮತ್ತು ಅಂಕಿತ ಚರಣಗಳನ್ನೊಳಗೊಂಡ ಕೃತಿಗಳನ್ನು ರಚಿಸಿದರು. ಈ ಮಾದರಿ ಕೃತಿಗಳು ಬಹಳ ಜನಪ್ರಿಯವಾಯಿತು. ಶ್ರೀ ಪುರಂದರ ದಾಸರ ನಂತರ ಬಂದ ತ್ರಿಮೂರ್ತಿಗಳೆನಿಸಿದ ಶ್ರೀ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶಾಮಾಶಾಸ್ತ್ರಿಗಳು ಇದೇ ಮಾದರಿಯನ್ನು ಅನುಸರಿಸಿ ಕೀರ್ತನೆಗಳನ್ನು ರಚಿಸಿದರು. ಹೀಗೆ ಶ್ರೀ ಪುರಂದರದಾಸರು ಹಾಕಿಕೊಟ್ಟ ಸಂಗೀತದ ಹಾದಿಗೆ ಕರ್ನಾಟಕ ಸಂಗೀತವೆಂದೂ ಶ್ರೀ ಪುರಂದರ ದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ'ನೆಂದು ಕರೆದರು.



ಶ್ರೀ ಪುರಂದರದಾಸರು ಕೀರ್ತನೆಗಳನ್ನೂ, ಸಪ್ತಸುಳಾದಿ ತಾಳಗಳನ್ನು ರಚಿಸಿ ಮಹದುಪಕಾರ ಮಾಡಿದ್ದಾರೆ. ಸಂಶೋಧನಕಾರರ ಪ್ರಕಾರ ಶ್ರೀ ಪುರಂದರದಾಸರು 4,25,000 ಕೃತಿಗಳನ್ನು ರಚಿಸಿದ್ದಾರೆಂದು ತಿಳಿಸಿದ್ದಾರೆ. ಆದರೆ ನಮಗೆ ದೊರಕಿರುವುದು 10-12 ಸಾವಿರ ಕೃತಿಗಳು. ಅದರಲ್ಲೂ ಬಳಕೆಯಲ್ಲಿರುವುದು ಒಂದು ಸಾವಿರ ಮಾತ್ರ ಎಂದು ಹೇಳಬಹುದು.

ಶ್ರೀ ಪುರಂದರದಾಸರ ಮೂಲ ಉದ್ದೇಶ ಭಕ್ತಿ ಪ್ರಸಾರ. ಅಂದಿನ ಸಾಮಾಜಿಕ ಅವ್ಯವಸ್ಥೆಯನ್ನು ಅರಿತ ದಾಸರು ಜನಗಳಿಗೆ ಮುಟ್ಟುವಂತೆ ಭಕ್ತಿಯನ್ನು ಬೋಧಿಸಬೇಕಾದರೆ ಸಂಗೀತ ಮಾಧ್ಯಮ ಮುಖ್ಯ ಎಂದು ಕಂಡುಕೊಂಡರು. ಜನ ಸಾಮಾನ್ಯರಿಗೂ ಅರ್ಥ ಮಾಡಿಸಿಕೊಡಬೇಕೆಂದು ಜನರೊಡನೆ ಬೆರೆತು ಅವರ ನೋವು ನಲಿವುಗಳನ್ನು ಹಂಚಿಕೊಂಡವರು. ದಾಸರು ಪಂಡಿತರು, ಶಾಸ್ತ್ರಜ್ಞರು, ಕಾವ್ಯದಲ್ಲಿ ಪರಿಣಿತರು. ಆದರೆ ಇದ್ಯಾವುದನ್ನೂ ಅವರು ಮೇಲೇರಿಸಿಕೊಂಡು ಹೋಗಲಿಲ್ಲ. ಸಾಮಾನ್ಯರಿಗೆ ತಿಳಿಯುವ ಶೈಲಿಯನ್ನೇ ಬಳಸಿ ಭಕ್ತಿ ಪ್ರಚಾರ ಮಾಡಲು ಪ್ರಯತ್ನಿಸಿದರು. ಅವರು ಕನ್ನಡ ಪಂಡಿತರಾದರೂ, ಅವರು ಬಳಸಿದುದು ಪಂಡಿತರ ಕನ್ನಡವನ್ನಲ್ಲ, ಜನರು ದಿನನಿತ್ಯ ಆಡುವ ಮಾತನ್ನೇ ಬಳಸಿ ಕೃತಿಗಳನ್ನು ರಚಿಸಿ ಕ್ರಾಂತಿಯನ್ನು ಮಾಡಿದರು. ಜನಸಾಮಾನ್ಯರೊಡನೆ ಬೆರೆತಿದ್ದರಿಂದ ಅವರಿಗೆ ಆಯಾವರ್ಗದ ಜನರಿಗೆ ಅನುಗುಣವಾಗಿ ಕೃತಿ ರಚನೆ ಮಾಡಲು ಸಾಧ್ಯವಾಯಿತು. ಉದಾಹರಣೆಗೆ.. ಜಯವದೆ, ಜಯವದೆ, ಈ ಮನೆತಕೆ... ಎಂದು ಹೇಳುವಾಗ ಬುಡುಬುಡುಕೆಯವರಂತೆ ಊರ ದೇವರ ಮಾಡಬೇಕಣ್ಣ ಎನ್ನುವಾಗ ಹಳ್ಳಿಯವನಂತೆ, ಜಂಗಮರು ನಾವು ಜಗದೊಳು ಎಂದಾಗ ವೀರಶೈವನಂತೆ ಕಟ್ಟುಬೇಕಮ್ಮ ಕಾಟಿದಮೆಯ ಎಂದಾಗ ಗೊಲ್ಲರಂತೆ, ತಾರಕ್ಕಾ ಬಿಂದಿಗೆ, ದೂರು ಮಾಡುವರೇನೆ, ಕಂದನ ಕಂಡೀರೇನೆ, ಹಾಲು ಮಾರಲು ಬಂದೆನಮ್ಮ, ಕೃತಿಗಳಲ್ಲಿ ಹಳ್ಳಿಯ ಹೆಂಗಸರೇ ಹೇಳಿದಂತೆ ಯಶೋದೆಯೇ, ಅಮ್ಮ ಎನ್ನನ್ನು ಎತ್ತಿಕೊಳ್ಳಮ್ಮ, ಗುಮ್ಮನ ಕರೆಯದಿರೆ, ಬೂಚಿಬಂದಿದೆ ಎನ್ನುವ ಕೃತಿಗಳಲ್ಲಿ ಮಕ್ಕಳೇ ಬಂದು ಹೇಳುತ್ತಿವೆಯೇನೋ ಎನ್ನುವಂತೆ ಅವರವರ ಭಾಷೆಯಲ್ಲೇ ದಾಸರು ಹೇಳಿದ್ದಾರೆ. ಗೂಢಾರ್ಥ ಚಿಂತನೆ ಮಾಡುವಂತೆ ಅನೇಕ ಕೃತಿಗಳನ್ನು ರಚಿಸಿ ಪಂಡಿತೋತ್ತಮರಿಗೆ ಕೆಲಸವನ್ನು ಹಚ್ಚಿದ್ದಾರೆ.

ದಾಸರು ಸಮಾಜದಲ್ಲಿರುವ ಲೋಪದೋಷಗಳನ್ನು ಎತ್ತಿ ತೋರಿಸಿ ಅವುಗಳಿಗೆ ಪರಿಹಾರವನ್ನೂ ತೋರಿಸಿದ್ದಾರೆ.

ಸಮಾಜದಲ್ಲಿ ಸಮಂಜಸವಾಗಿರಬೇಕಾದರೆ
ಕಲ್ಲಾಗಿ ಇರಬೇಕು ಕಠಿಣ ಭವದೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳು
ಬೆಲ್ಲವಾಗಿರಬೇಕು ಬಂಧುಗಳೊಳಗೆ
ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು
ಎಂದು ಮಾರ್ಗದರ್ಶನ ಮಾಡಿದ್ದಾರೆ.

ದ್ವೇಷಕ್ಕೆ ಪ್ರತಿದ್ವೇಷ ಒಳ್ಳೆಯದಲ್ಲ, ಅದರಿಂದ ಸಮಾಜ ಹಾಳಾಗುತ್ತದೆ. ರಾಷ್ಟ್ರದ ಶಕ್ತಿ ಕುಗ್ಗುತ್ತದೆ ಎಂದು ತಿಳಿಸಿ ಅದಕ್ಕೆ ಪರಿಹಾರವೋ ಎಂಬಂತೆ ರಚಿಸಿರುವ ಕೃತಿಯನ್ನು ಗಮನಿಸಿ. ಧರ್ಮವೇ ಜಯವೆಂಬ ದಿವ್ಯಮಂತ್ರ, ಕೃತಿಯಲ್ಲಿ ದಾಸರ ಅಭಿಪ್ರಾಯದಲ್ಲಿ ಯಾವುದು ಧರ್ಮ? ವಿಷವಿಕ್ಕಿದವಗೆ ಷಡ್ರಸವನುಣಿಸಲು ಬೇಕು, ದ್ವೇಷ ಮಾಡಿದವನ ಪೋಷಿಸಲು ಬೇಕು, ಪುಸಿಮಾಡಿ ಕೆಡಿಸುವವನ ಹಾಡಿ ಹರಸಲು ಬೇಕು, ಮೋಸ ಮಾಡಿದವನ ಹೆಸರು ಮಗನಿಗಿಡಬೇಕು ಹಿಂದೆನಿಂದಿಪರನ್ನು ವಂದಿಸುತಲಿರಬೇಕು ಎಂದು ಬೋಧಿಸುವುದನ್ನು ನೋಡಿದರೆ ದಾಸರು ರಾಜಕೀಯದಲ್ಲೂ ತಜ್ಞರು ಎನ್ನುವಂತಾಗುತ್ತದೆ.

ಮಾನವನ ಎಲ್ಲಾ ವಿನಾಶಕ್ಕೂ ಅಹಂಕಾರವೇ ಕಾರಣ. ಅಹಂಕಾರವನ್ನು ವರ್ಜಿಸಬೇಕು ಎಂದು

ತಿಳಿಸಿ, ದಾಸರು ತಮ್ಮ ಒಂದು ಕೃತಿಯಲ್ಲಿ ಪುರಾಣದ ವ್ಯಕ್ತಿಗಳನ್ನೆಲ್ಲಾ ಉದಾಹರಿಸಿ ಅಹಂಕಾರಪಡುವವರನ್ನೂ ನಾಚಿಸುವಂತೆ ಮಾಡಿದ್ದಾರೆ. ಗುರುವ್ಯಾತಕೋನಿನಗೆ ಪಾಮರ ಮನುಜನೇ ಎನ್ನುವ ಕೃತಿಯಲ್ಲಿ ಧರೆಯೊಳಗೆ ನೀ ಕುರುಪತಿಯೇ ಬಲದಲ್ಲಿ ಹಲಧರನೆ, ಛಲದಲ್ಲಿ ರಾವಣನೇ, ಕುಲದಲ್ಲಿ ವಸಿಷ್ಠಗೌತಮನೇ, ನೆಲೆಯಲ್ಲಿ ಭೃಗುಮುನಿಯೇ, ನೇಮದಲಿ ಗಾಂಗೇಯನೇ, ಒಲುಮೆಯಲಿ ವಾಲ್ಮೀಕಿಯೇ, ಹಟದಲ್ಲಿ ಪ್ರಹ್ಲಾದನೇ, ನಿಟದಲ್ಲಿ ಧ್ರುವನೇ, ವಿಟರೊಳು ಮನ್ಮಥನೇ, ವೀರರೊಳು ಪಾರ್ಥನೇ, ಕುಟಿಲದಲಿ ಶಕುನಿಯೇ, ದಾನದೊಳು ಕರ್ಣನೇ, ಗಾನದೊಳು ನಾರದನೇ ಎಂದು ಮಾರ್ಮಿಕವಾಗಿ ಹಂಗಿಸಿ ಹಳಿದಿದ್ದಾರೆ.

ದಾಸರು ಭಗವದ್ಭಕ್ತಿಗೆ ಮಹತ್ವ ಕೊಟ್ಟವರು. ಭಕ್ತಿಯಿಂದಲೇ ಮುಕ್ತಿಸಾಧನ ಎಂದು ತಿಳಿದವರು. ಆದರೆ ಭಕ್ತಿ ಎಂಬುವುದು ಎಲ್ಲರಿಗೂ ಸುಮ್ಮನೆ ಬರುವಂತಹುದಲ್ಲ. ಭಕ್ತಿಯನ್ನು ತರಿಸಿಕೊಳ್ಳ ಬೇಕಾದರೆ ಏನು ಮಾಡಬೇಕು ಎಂಬುದನ್ನು ವಿವರಿಸುತ್ತಾರೆ. ಸುಮ್ಮನೇ ಬರುವುದೇ ಭಕ್ತಿ - ಮುಕ್ತಿ ಮನದಲ್ಲಿ ದೃಢವಿರಬೇಕು, ಕಾಮಕ್ರೋಧ ಬಿಡಬೇಕು, ಹೇಮದಾಸೆ ಸುಡಬೇಕು ಕಾಮಿನಿಯರ ಹಂಬಲ ಬಿಡಬೇಕು, ನಿಂದಿಸಿದರೆ ಹಿಗ್ಗಬೇಕು, ಹರಿಯೇ ಗುರುವೆನ್ನಬೇಕು ಜ್ಞಾನದೀಪದ ಬೆಳಕಿನಲಿ ಓಡಾಡಬೇಕು ಎಂದು ತಿಳಿಯಪಡಿಸಿ ಭಕ್ತಿ ಮಾರ್ಗಕ್ಕೆ ದಾರಿಯನ್ನು ತೋರಿಸಿಕೊಟ್ಟಿದ್ದಾರೆ.

ಶ್ರೀ ಪುರಂದರದಾಸರು ಎಂದೂ ಸ್ವಮತ ಮಂಡನೆ ಪರಮತ ಖಂಡನೆ ಮಾಡಿದವರಲ್ಲ. ವಾದ ವಿವಾದಗಳಲ್ಲಿ ತೊಡಗಿಸಿ ಕೊಂಡವರಲ್ಲ.

ವ್ಯಾಸಂಗ ಪ್ರವಚನಗಳಲ್ಲಿ ಸಮಯವನ್ನು ಕಳೆದವರಲ್ಲ. ಅವರ ಬಾಳಿನಲ್ಲಿ ಸಾಧನೆಗೆ ಹಿರಿಯಪಟ್ಟ ಸಾಧನೆಯೆಂದರೆ ಭಗವತ್ತತ್ವ- ಭಗವಂತನ ಸಾಕ್ಷಾತ್ಕಾರ ಇವೇ. ಭಗವಂತನ ಸಾಕ್ಷಾತ್ಕಾರಕ್ಕಾಗಿ ಹೊರಟ ದಾಸರು ಅನೇಕ ಕಷ್ಟ-ನಷ್ಟ, ಅವಮಾನ ತಿರಸ್ಕಾರಗಳನ್ನು ಅನುಭವಿಸಿದವರು. ಆದರೆ ಸಾಮಾನ್ಯ ಮನುಜರಂತೆ ಅವಮಾನ ತಿರಸ್ಕಾರಗಳಿಗೆ ನಾಚಿಕೆ ಪಟ್ಟು ಸಾಧನೆಯನ್ನು ಕೈಬಿಟ್ಟವರಲ್ಲ. ಸತತ ಸಾಧನೆಯನ್ನು ಮಾಡಿ ಭಗವಂತನನ್ನು ಹೇಗೆ ಸಾಕ್ಷಾತ್ಕಾರ ಮಾಡಿಕೊಂಡರು ಎಂಬುವುದನ್ನು ಅವರ ಕೃತಿಗಳಿಂದಲೇ ತಿಳಿದುಕೊಳ್ಳಬಹುದು.

ಎಲ್ಲವನ್ನೂ ಶ್ರೀ ಕೃಷ್ಣಾರ್ಪಣಮಸ್ತು ಎಂದು ದಾನ ಮಾಡಿದಾಗ ಕೇಳಿದ ಜನರಿಗೆ ಆದುದೆಲ್ಲಾ ಒಳಿತೇ ಆಯಿತು. ಮುಂದೆ ನಿಮ್ಮ ಗತಿ ಏನು ಎಂದಾಗ ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ. ನಿಲ್ಲಲು ಮನೆಯನ್ನಾದರೂ ಇಟ್ಟುಕೊಳ್ಳಬಹುದಾಗಿತ್ತು ಎಂದು ಪೇಚಾಡಿದವರಿಗೆ ಅಲ್ಲಿದೆ ನಮ್ಮ ಮನೆ ಇಲ್ಲೆಲ್ಲಾ ಸುಮ್ಮನೆ ಎನ್ನುವ ಸಮಾಧಾನ. ದಯಾಮಾಡೋ ರಂಗ ದಯಾಮಾಡೋ ಎಂದು ಭಗವಂತನ ಸಾಕ್ಷಾತ್ಕಾರಕ್ಕೆ ದೈನ್ಯದ ಬೇಡಿಕೆ. ದೇವರು ದಯೆ ತೋರದಿರಲು ಇನ್ನೂ ದಯಬಾರದೆ ದಾಸನ ಮೇಲೆ ಎನ್ನುವ ಜಿಗುಪ್ಸೆ, ಇನ್ನು ಒಲಿಯದಿರಲು ಕರುಣಾಕರ ನೀನೆಂಬುದೇಕೆ ಎಂದು ಲಘು ಆಕ್ಷೇಪ, ಕೊನೆಗೆ ಸಿಟ್ಟಿನಿಂದ ಯಾರು ಬದುಕಿರಯ್ಯಾ ಹರಿ ನಿನ್ನ ನಂಬಿ ಎನ್ನುವ ಆಕ್ಷೇಪದ ಬೈಗುಳ, ಜ್ಞಾನಿಗಳಾದುದರಿಂದ ನಾ ಮಾಡಿದ ಕರ್ಮ ಬಲವಂತ ವಾದರೆ ನೀ ಮಾಡುವುದೇನೋ ಎನ್ನುವ ಸಮಾಧಾನ, ಸಾಧನೆ ಮುಂದುವರಿಯುತ್ತಿರಲು ಭಗವಂತನ ರೂಪುರೇಷೆಗಳು ಗೋಚರಿಸಿದಂತಾಗಿ ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ ಎನ್ನುವ ಹರ್ಷ, ಸಾಧನೆಯ ಫಲ ಇನ್ನೂ ಹೆಚ್ಚಾಗಿ ಭಗವಂತ ಕನಸಿನಲ್ಲಿ ದರ್ಶನ ಕೊಟ್ಟಾಗ ಕಂಡೆನಾಕನಸಿನಲಿ ಗೋವಿಂದನ ಎನ್ನುವ ಸಂತಸ, ಕೊನೆಯಲ್ಲಿ ತಿರುಪತಿಯಲ್ಲಿ ಭಗವಂತ ಸಾಕ್ಷಾತ್ಕಾರವಾದಾಗ ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ ಎಂದು ಮೈಮರೆತು ಪುಳಕಿತರಾಗುತ್ತಾರೆ.

ಸತತ ಸಾಧನೆಯೇ ಜೀವನದ ಮುಖ್ಯ ಗುರಿಯಾಗಿರಬೇಕೆಂಬು ದನ್ನು ದಾಸರು ತಿಳಿಸಿದ್ದಾರೆ.

ದಾಸರು ಒಂದೆಡೆ ನಿಂತವರಲ್ಲ. ಎಲ್ಲಾ ಕಡೆ ಓಡಾಡಿದವರು. ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿಯ ದೇವತಾ ಮತ್ತು ಕ್ಷೇತ್ರ ಮಹಿಮೆಯ ಕೃತಿಗಳನ್ನು ರಚಿಸಿದರು. ಅರುಣಗಿರಿ, ಅಹೋಬಲ, ಉಡುಪಿ, ಕಂಚಿ, ಕನಕಾಚಲ, ಕಾಶಿ, ಕುಂಭಕೋಣ, ತಿರುಪತಿ, ಪಂಡರಪುರ, ಶೃಂಗಾರಪುರ (ಶೃಂಗೇರಿ), ಶ್ರೀರಂಗ, ಶ್ರೀರಂಗಪಟ್ಟಣ ಮುಂತಾದ ಕಡೆ ಸಂಚರಿಸಿ ಆಯಾ ದೇವರ ಕೃತಿಗಳನ್ನು ರಚಿಸಿ ಭಾವೈಕ್ಯತೆಯ ಪ್ರತೀಕವೆಂದು ಪ್ರಸಿದ್ಧಿ ಪಡೆದವರು ದಾಸರು. ದಾಸರು ಇರುವವರೆಗೂ ವಿಜಯನಗರ ಸಾಮ್ರಾಜ್ಯ ಸುಭದ್ರವಾಗಿತ್ತು. 1564ರಲ್ಲಿ ದೇಹತ್ಯಾಗ ಮಾಡಿದ ಮೇಲೆ 1565ರಲ್ಲಿ ತಾಳಿಕೋಟೆ ಯುದ್ಧವಾಗಿ ವಿಜಯ ನಗರ ಸಾಮ್ರಾಜ್ಯ ಪತನವಾಯಿತು. ಕೆಲವರು ಇದನ್ನೇ ಆಧಾರವಾಗಿಟ್ಟುಕೊಂಡು ಪುರಂದರದಾಸರು ರಾಜ ಸಲಹೆಗಾರರಾಗಿದ್ದರೆಂದು ಹೇಳುತ್ತಾರೆ. ಆದರೆ ಇದನ್ನೂ ದೃಢೀಕರಿಸಲು ಸೂಕ್ತ ಆಧಾರಗಳಿಲ್ಲ.

ದಾಸರು ತಮ್ಮ ರಚನೆಗಳನ್ನು ಪದ್ಯ ರೂಪವಾಗಿಯೋ ಪ್ರಬಂಧ ರೂಪವಾಗಿಯೋ ಗ್ರಂಥವಾಗಿ ರಚಿಸಿದ್ದರೆ, ಇಂದು ನಾವು ಅವರನ್ನು ಪೂಜಿಸುತ್ತಿರಲಿಲ್ಲ. ಕರ್ನಾಟಕ ಸಂಗೀತವೆಂಬ ಅನರ್ಘ್ಯವಾದ ರತ್ನವನ್ನು ಕರ್ನಾಟಕಕ್ಕೆ ಅಲ್ಲ, ಇಡೀ ವಿಶ್ವಕ್ಕೆ ಕೊಟ್ಟ ಮಹಾತ್ಮರು.

ಇಂತಹ ಪುಣ್ಯ ಪುರುಷರನ್ನು ಪಡೆದ ನಾವು ಕನ್ನಡಿಗರು ಧನ್ಯರು. ಶ್ರೀ ಪುರಂದರದಾಸರ ಕೊಡುಗೆಯಿಂದ ಕನ್ನಡ ನಾಡು, ನುಡಿ, ಸಂಸ್ಕೃತಿ, ಸಂಗೀತಗಳು ಸಂಪದ್ಭರಿತವಾಯಿತು. ಈ ಮಹಾನ್ ವ್ಯಕ್ತಿಗೆ ನಾವು ಕೃತಜ್ಞರಾಗಿರಬೇಕಾದರೆ ಪ್ರತಿಯೊಂದು ಮನೆಯಲ್ಲೂ ಶ್ರೀ ಪುರಂದರ ದಾಸರ ಕೃತಿಗಳನ್ನು ಕೊನೆಯ ಪಕ್ಷ 20, ಕೀರ್ತನೆಗಳನ್ನು ಶೃತಿ, ಲಯಬದ್ಧವಾಗಿ ಭಕ್ತಿಯಿಂದ ಕರ್ನಾಟಕ ಸಂಗೀತ ಪದ್ಧತಿಯಂತೆ ಹಾಡುವಂತಾಗಬೇಕು. ಇದೇ ನಾವು ಕರ್ನಾಟಕ ಸಂಗೀತ ಪಿತಾಮಹನಿಗೆ ತೋರಿಸಬೇಕಾದ ಗೌರವ.

*(ದಿನಾಂಕ 29-1-2006 ಪುಷ್ಯ ಬಹುಳ ಅಮಾವಾಸ್ಯೆಯಂದು ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರ ಪುಣ್ಯ ದಿನ. ಇದಕ್ಕಾಗಿ ಸಿದ್ಧ ಪಡಿಸಿದ ಭಕ್ತಿಪೂರ್ವಕ ಲೇಖನ).*


## The Mysore Association, Bombay
### Forth Coming Programmes

ಶನಿವಾರ, ದಿನಾಂಕ ೧೫.೦೨.೨೦೦೬ರಿಂದ ೧೮.೦೨.೨೦೦೬ರ ವರೆಗೆ

**ಕನ್ನಡ ಕಲಾ ಕೇಂದ್ರದವರಿಂದ**

ಮೈಸೂರು ಅಸೋಸಿಯೇಷನ್ ಸಭಾಗೃಹದಲ್ಲಿ

**ನಾಟಕೋತ್ಸವ**

ರವಿವಾರ, ೨೬.೦೨.೨೦೦೦೬ ಸಂಜೆ ೬.೦೦ ರಿಂದ ೬.೦೦ರ ವರೆಗೆ

ಆಟೋಟ ಸ್ಪರ್ಧೆಯ ಬಹುಮಾನ ವಿತರಣೆ ಕಾರ್ಯಕ್ರಮ

೬.೦೦ರಿಂದ ಮಹಾಶಿವರಾತ್ರಿ ಪೂಜೆ ಮತ್ತು ಪ್ರಸಾದ ವಿನಿಯೋಗ

**ಚಂದ್ರಶೇಖರ ಕಂಬಾರರ ನಾಟಕೋತ್ಸವವು**

೦೫.೦೨.೨೦೦೬ರಿಂದ ೧೨.೦೨.೨೦೦೬ರ ಬದಲು

ಬುಧವಾರ ೨೨.೦೩.೨೦೦೬ರಿಂದ ೨೬.೦೩.೨೦೦೬ ವರೆಗೆ ನಡೆಯುವುದು.

ವಿವರಗಳಿಗೆ ಅಸೋಸಿಯೇಷನ್‌ನಲ್ಲಿ ಸಂಪರ್ಕಿಸಿರಿ.

# ಉಮಾ ರಾವ್ ರವರ "ಬಿಸಿಲು ಕೋಲು" ಪುಸ್ತಕದ ಬಿಡುಗಡೆ ಸಮಾರಂಭ

-ಪ್ರಸಾದ್

ಹೊಸವರ್ಷದ ಮೊದಲನೆಯ ದಿನ ಜನವರಿ ಒಂದರಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಜಯನಗರ ಬಡಾವಣೆಯ 8ನೆಯ ಬ್ಲಾಕಿನಲ್ಲಿರುವ ಜೆ.ಎಸ್.ಎಸ್. ಸಭಾಗೃಹದಲ್ಲಿ ಉಮಾ ರಾವ್ ಅವರು




ಬರೆದಿರುವ "ಬಿಸಿಲು ಕೋಲು" ಎಂಬ ಶೀರ್ಷಿಕೆಯ, ಖ್ಯಾತ ಚಲನಚಿತ್ರ ಛಾಯಾಗ್ರಾಹಕರಾದ ಅಸೋಸಿಯೇಶನ್‌ನ ಸದಸ್ಯರು ಮತ್ತು ಮಿತ್ರರಿಗೆ "ಕುಟ್ಟಿ" ಎಂದೇ ಪರಿಚಿತರಾದ ವಿ.ಕೆ. ಮೂರ್ತಿಯವರ ಜೀವನ ಕಥೆಯ ಪುಸ್ತಕದ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕರ್ನಾಟಕದ ಉಪ ಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರು ಮುಖ್ಯ ಅತಿಥಿಯಾಗಿ ಬಂದು ಪುಸ್ತಕವನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮವು ಹೆಸರಾಂತ ಚಲನಚಿತ್ರ ನಿರ್ದೇಶಕ ಮತ್ತು ಛಾಯಾಗ್ರಾಹಕರಾದ ಗೋವಿಂದ್ ನಿಹಲಾನಿಯವರು ತಯಾರಿಸಿದ ವಿ.ಕೆ. ಮೂರ್ತಿಯವರ ಒಂದು ಸಾಕ್ಷ್ಯಚಿತ್ರದೊಂದಿಗೆ ಪ್ರಾರಂಭ ವಾಯಿತು. ಇದು ಗೋವಿಂದ್ ನಿಹಲಾನಿಯವರುಅವರ ಗುರುವಾದ ಕುಟ್ಟಿಯವರಿಗೆ ಅರ್ಪಿಸಿದ ನಮನ. ಇದರಲ್ಲಿ ಕುಟ್ಟಿಯವರ ಹೆಸರಾಂತ ಚಿತ್ರಗಳಾದ "ಪ್ಯಾಸಾ", "ಕಾಗಜ್ ಕೆ ಫೂಲ್", "ಸಾಹಿಬ್, ಬೀಬಿ ಔರ್ ಗುಲಾಮ್", "ಸಿ.ಐ.ಡಿ" ಇತ್ಯಾದಿಗಳ ಆಯ್ದ ಅಂಶಗಳನ್ನೂ ಮತ್ತು ಕುಟ್ಟಿಯವರೊಡನೆ ನಡೆಸಿದ ಸಂದರ್ಶನವನ್ನೂ ಬಹಳ ಸುಂದರವಾಗಿ ಜೋಡಿಸಿ ಕುಟ್ಟಿಯವರ ಕಲಾತ್ಮಕ ಪ್ರತಿಭೆಯ ಒಂದು ಕಿರು ನೋಟವನ್ನು ಗೋವಿಂದ್ ನಿಹಲಾನಿ ನೋಡುಗರಿಗೆ ನೀಡಿದ್ದಾರೆ.

ಮುಂಬಯಿಯಲ್ಲಿ ಅರ್ಧ ಶತಮಾನವನ್ನು ಕಳೆದ ಕುಟ್ಟಿಯವರಿಗೂ ಮೈಸೂರು ಅಸೋಸಿಯೇಶನಿಗೂ ಇರುವ ನಿಕಟ ಸಂಬಂಧದ ಬಗ್ಗೆ ಮಾತನಾಡುತ್ತಾ ಡಾ. ಮಂಜುನಾಥರು ಕುಟ್ಟಿ ಯವರು ಅಲ್ಲಿ ನಾಟಕ ಮತ್ತು ಇತರ ಕಲಾತ್ಮಕ ಕಾರ್ಯಕ್ರಮಗಳನ್ನು ಬೆಳೆಸಿದ್ದುದನ್ನು ತಿಳಿಸಿದರು. ಹೆಚ್ಚು ಮಾತಿಲ್ಲದಿದ್ದರೂ, ಕುಟ್ಟಿಯವರಿಗೆ ಜನರನ್ನು ಆಕರ್ಷಿಸಿ ಮರುಳು ಮಾಡುವ ವಿಶೇಷ ಸಾಮರ್ಥ್ಯವಿದ್ದಿತು. ಇದರಿಂದಲೇ ಅವರು ಅಷ್ಟೊಂದು ಜನರನ್ನು ಒಂದುಗೂಡಿಸಿ, ನಾಟಕ, ಸಂಗೀತ ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಯಿತು. ಆಗ ನಾಟಕ ಎಂದರೆ ತಾವೇ, ಆ ನಾಟಕಕ್ಕೆ ಬೇಕಾದ ಸೆಟ್ಟಿಂಗು, ಸಲಕರಣೆಗಳು, ಬೆಳಕು, ಸಂಗೀತ ಇತ್ಯಾದಿಗಳನ್ನು ಮಾಡಿಕೊಳ್ಳಬೇಕಾಗಿತ್ತು. ಅದ್ದರಿಂದ ಈ ನಾಟಕಗಳು ಬರೀ ನಾಟಕಗಳೇ ಆಗದೆ ಒಂದು ವಿಧದಲ್ಲಿ theatre worshop ಆಗಿದ್ದವು ಮತ್ತು ಇದರಲ್ಲಿ ಭಾಗವಹಿಸಿದವರು all round theatreಗೆ expose ಆಗಿದ್ದರು. ಹೀಗೆ ನೂರಾರು ಕಲಾವಿದರನ್ನು ತಯಾರು ಮಾಡಿದ ಶ್ರೇಯಸ್ಸು ಕುಟ್ಟಿಗೆ ಸಲ್ಲುತ್ತದೆ ಎಂದು ಅಭಿಪ್ರಾಯ ಪಟ್ಟರು.

ಹೆಸರಾಂತ ಸಾಹಿತಿ ಮತ್ತು ಪತ್ರಕರ್ತೆ ಡಾ. ವಿಜಯ ಅವರು ಕೃತಿಯ ಬಗ್ಗೆ ಮಾತನಾಡುತ್ತಾ ಅನೇಕ ವೇಳೆ ಸಂದರ್ಶನ ನಡೆಸಿದಾಗ ಸಂದರ್ಶಕರ ಅಭಿಪ್ರಾಯವು ಸಂದರ್ಶನದಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಉಮಾ ಅವರು ಈ ಪುಸ್ತಕದ ಉದ್ದಕ್ಕೂ ಹಿನ್ನೆಲೆಯಲ್ಲಿಯೇ ಇದ್ದು, ಸಂದರ್ಶನಗಳನ್ನು ಬಹಳ ಪ್ರಾಮಾಣಿಕವಾಗಿ ಪ್ರಸ್ತುತ ಪಡಿಸಿದ್ದಾರೆ ಎಂದು ಹೇಳಿದರು. ಹೆಚ್ಚು ಮಾತೇ ಆಡದ ಕುಟ್ಟಿಯವರಿಂದ ಇಷ್ಟೊಂದು ವಿಷಯಗಳನ್ನು ಹೊರ ತಂದುದಕ್ಕೆ ಉಮಾ ಅವರನ್ನು ಅಭಿನಂದಿಸಿದರು. ಈ ಕೃತಿಯಲ್ಲಿ ಉಮಾ ಅವರು cinematographyಗೆ ಸಂಬಂಧ ಪಟ್ಟ ತಾಂತ್ರಿಕ ವಿಷಯಗಳನ್ನೂ ಬಹಳ ಚೆನ್ನಾಗಿ ಹೊರ ತಂದಿದ್ದಾರೆ. ಇದನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದರೆ, ಇದನ್ನು cinematography ಕೋರ್ಸ್‌ಗಳಿಗೆ ಪಠ್ಯಪುಸ್ತಕವಾಗಿ ಇಡಬಹುದು ಎಂದರು.

ಗೋವಿಂದ್ ನಿಹಲಾನಿಯವರು ತಮ್ಮ ಗುರುಗಳಾದ ಕುಟ್ಟಿ ಯವರ ಬಗ್ಗೆ ಮಾತನಾಡುತ್ತಾ, ಇಂದಿನ ದಿನ ಒಂದು ಸ್ಮರಣೀಯ ದಿನ, ಏಕೆಂದರೆ ಭಾರತೀಯ ಚಿತ್ರ ಜಗತ್ತಿನ ನೂರು ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿ ಒಬ್ಬ technician ಬಗ್ಗೆ ಒಂದು ಪುಸ್ತಕ ಹೊರ ಬಂದಿರುವುದು, ಹಾಲಿವುಡ್ ತೋರಿಸಿದ ದಾರಿಯಲ್ಲೇ ನಡೆಯುತ್ತಿದ್ದ ಮುಂಬಯಿನ ಚಿತ್ರ ಜಗತ್ತಿನಲ್ಲಿ ಒಂದು ಹೊಸದಾದ ಹಾದಿಯನ್ನು ತೋರಿಸಿದ ಹಿರಿಮೆ ಮೂರ್ತಿ ಸಾಹೇಬರಿಗೆ ಸೇರಿದ್ದು, ಛಾಯಾಗ್ರಹಣವು ಚಿತ್ರದ ಸನ್ನಿವೇಶಕ್ಕೆ ಸರಿಯಾದ mood ಮತ್ತು ಭಾವನೆಗಳನ್ನು ನೋಡುಗರಲ್ಲಿ ಮೂಡಿಸಬೇಕು ಎಂಬುದನ್ನು ತೋರಿಸಿಕೊಟ್ಟವರು ಮೂರ್ತಿ ಸಾಹೇಬರು. ಅವರ ಶಿಷ್ಯನಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದುದು ನನ್ನ ಭಾಗ್ಯ ಎಂದು ಹೇಳಿದರು.

ಮುಖ್ಯ ಅತಿಥಿಯಾದ ಶ್ರೀ ಎಂ.ಪಿ. ಪ್ರಕಾಶ್




ಬಿಸಿಲು ಕೋಲು ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ಜಯಂತ್ ಕಾಯ್ಕಿಣಿ, ಉಮಾ ಪ್ರಭಾಕರ, ಎಂ. ಪಿ. ಪ್ರಕಾಶ್, ವಿ.ಕೆ. ಮೂರ್ತಿ, ಸಂಧ್ಯಾ ಮೂರ್ತಿ, ಗೋವಿಂದ ನಿಹಲಾನಿ, ಬಿ. ಆರ್. ಮಂಜುನಾಥ್ ಮತ್ತು ವಿಜಯಾ

ಅವರು ಕುಟ್ಟಿಯ ಸರಳ ಸ್ವಭಾವದ ಬಗ್ಗೆ ಮಾತನಾಡುತ್ತಾ ಇಂತಹ ಹೆಸರಾಂತ ಕಲಾವಿದರು ನಮ್ಮಲ್ಲಿ ಇದ್ದರೂ, ಕನ್ನಡ ಚಿತ್ರರಂಗ ಇವರ ಕಲೆ ಮತ್ತು ಪ್ರತಿಭೆಯನ್ನು ಉಪಯೋಗಿಸಿ ಕೊಳ್ಳಲಿಲ್ಲವೆಂಬುದು ವಿಷಾದಕರ. ಈಗಲೂ ಸಮಯವಿದೆ, ಇದನ್ನು ನಾವು" ಸುಧಾರಿಸಿಕೊಳ್ಳಲು ಪ್ರಯತ್ನಿಸಬಹುದು ಎಂದು ಅಭಿಪ್ರಾಯ ಪಟ್ಟರು. ಮುಂಬಯಿಯಲ್ಲಿ ತಾವು ವ್ಯಾಸಂಗ ಮಾಡುತ್ತಿದ್ದ ದಿನಗಳ ಬಗ್ಗೆ ಮಾತನಾಡುತ್ತಾ, ಮೈಸೂರು ಅಸೋಸಿಯೇಶನ್ನಿನೊಡನೆ ಮತ್ತು ನಾಟಕ ರಂಗ ದೊಡನೆ ತಮಗೆ ಇದ್ದ ನಿಕಟ ಸಂಬಂಧವನ್ನು ತಿಳಿಸಿದರು. ಅಂದಿನ ದಿನಗಳಲ್ಲಿ ಒಮ್ಮೆ ಅಂತರ್ಕಾಲೇಜು ನಾಟಕ ಸ್ಪರ್ಧೆಗೆ 'ಜಹಾ ಆರಾ' ನಾಟಕ ಆಡಿದ್ದನ್ನೂ (ಅದರಲ್ಲಿ ಪ್ರಕಾಶ್ ಅವರೊಡನೆ ಕುಟ್ಟಿಯ ಪತ್ನಿ ಸಂಧ್ಯಾ ನಟಿಸಿದ್ದರು), ಆಗ ಕುಟ್ಟಿಯವರು ಹೆಸರಾಂತ ಕಲಾವಿದ ಎಂ.ಆರ್. ಆಚರೇಕರ್ ಅವರಿಂದ ರಂಗ ಸಜ್ಜಿಕೆಗೆ ಸಹಾಯ ಕೋರಿದ್ದನ್ನೂ ಸ್ಮರಿಸಿಕೊಂಡರು. ಆ ಕಾಲದಲ್ಲಿ R.K. Filmsನ art director ಆಗಿ ಖ್ಯಾತಿ ಹೊಂದಿದ್ದ ಆಚರೇಕರ್ ಈ ಕಾಲೇಜು ತಂಡಕ್ಕೆ ರಂಗ ಸಜ್ಜಿಕೆಯ ಸಹಾಯ ಮಾಡಿದ್ದು ಕೇವಲ ಕುಟ್ಟಿಯವರು ಕೇಳಿದ್ದರಿಂದ ಎಂದರು.

ಪುಸ್ತಕದ ಬಿಡುಗಡೆಯಾದ ನಂತರ ಕುಟ್ಟಿಯವರನ್ನು ಒಂದೆರಡು ಮಾತನಾಡಬೇಕೆಂದು ಕೋರಲಾಯಿತು. ಅವರು ಮಾತನಾಡುತ್ತಾ ಇಷ್ಟೆಲ್ಲಾ ಗೌರವಕ್ಕೆ ತಾನು ಅರ್ಹನೇ ಎಂಬುದು ಗೊತ್ತಿಲ್ಲ ಎಂದು ಹೇಳಿ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು.


ಲೇಖಕಿ ಉಮಾ ಈ ಪುಸ್ತಕವನ್ನು ಹೊರತರಲು ಬೇಕಾದ ಎರಡು ವರ್ಷಗಳ ಪರಿಶ್ರಮದಲ್ಲಿ ತಮಗೆ ನೆರವಾದವರನ್ನು ವಂದಿಸಿದರು. ಕುಟ್ಟಿಯವರ ಪರಿಚಯ ಅನೇಕ ವರ್ಷಗಳಿಂದ ಇದ್ದರೂ ಅವರ ಕಥೆಯನ್ನು ಬರೆಯುವ ಯೋಚನೆ ಬಂದದ್ದು ಇತ್ತೀಚೆಗೆ. ಇದಕ್ಕೆ ಮುಂಚೆ ಯಾಕೆ ಈ ಯೋಚನೆ ಬರಲಿಲ್ಲವೋ ಗೊತ್ತಿಲ್ಲ ಎಂದರು.

ಕಾರ್ಯಕ್ರಮವನ್ನು ಬಹಳ ಚೆನ್ನಾಗಿ ನಡೆಸಿ ಕೊಟ್ಟವರು ಜಯಂತ ಕಾಯ್ಕಿಣಿ. ನವಿರಾದ ಹಾಸ್ಯಮಯ ಸನ್ನಿವೇಶಗಳನ್ನು ಪ್ರಸ್ತಾವಿಸುತ್ತಾ ಸಮಾರಂಭದುದ್ದಕ್ಕೂ ಜನರ ಆಸಕ್ತಿಯನ್ನು ಜೀವಂತವಾಗಿ ಇರಿಸಿದ್ದರು.

ಕುಟ್ಟಿಯವರ ಈ ಯಶಸ್ವೀ ಪಯಣದ ಸಂಗಾತಿ ಸಂಧ್ಯಾ ಅವರ ಪಾತ್ರವನ್ನು ಎಲ್ಲಾ ಭಾಷಣಕಾರರೂ ಸ್ಮರಿಸಿದರು. ಕಾರ್ಯಕ್ರಮದ ನಂತರ ಸಂಧ್ಯಾ ಮತ್ತು ಅವರ ಕುಟುಂಬದವರಿಂದ ಎಲ್ಲರಿಗೂ ಊಟದ ಏರ್ಪಾಡಾಗಿತ್ತು. ಭಾನುವಾರದ ದಿನ ಬೆಳಿಗ್ಗೆ ಸಭಾಗೃಹ ತುಂಬುವಷ್ಟು ಜನ ಸೇರಿದ್ದುದು ಕುಟ್ಟಿ ಮತ್ತು ಸಂಧ್ಯಾ ಹಾಗೂ ಉಮಾ ಅವರ ಸ್ನೇಹಪರತೆಯ ಸಂಕೇತ.

ಒಟ್ಟಿನಲ್ಲಿ ಈ ಕಾರ್ಯಕ್ರಮ ಬಹಳ ಸುಂದರವಾಗಿ ಮೂಡಿ ಬಂದಿತು. ಮೈಸೂರು ಅಸೋಸಿಯೇಶನಿನ ಮತ್ತು ಮುಂಬಯಿನ ಅನೇಕ ಗೆಳೆಯರು ಸೇರಿದ್ದರು. ಎಲ್ಲರ ಮನದಲ್ಲೂ ಹಳೆಯ ದಿನಗಳ ನೆನಪುಗಳು ತುಂಬಿತ್ತು. ಅಸೋಸಿಯೇಶನಿನ ಪರವಾಗಿ ಮತ್ತು ಅಸೋಸಿಯೇಶನ್ನಿನ ಲಲಿತಕಲಾ ವಿಭಾಗದ ಪರವಾಗಿ ಕುಟ್ಟಿ ಮತ್ತು ಉಮಾ ಅವರಿಗೆ ಪುಷ್ಪಗೌರವವನ್ನು ಕೆ. ಮಂಜುನಾಥಯ್ಯ, ಪ್ರಸಾದ್ ಮತ್ತು ನಾಗೇಶ್ ಬೆಲ್ವಾಡಿಯವರು ಅರ್ಪಿಸಿದರು.

## ಅಗಲಿಕೆ



ಎಂ. ಸಂಪತ್

ಖ್ಯಾತ ಚಲನ್ ಚಿತ್ರ ಛಾಯಾಗ್ರಾಹಕರಾದ ಎಂ. ಸಂಪತ್ ಜನವರಿ ಆರಂದು ನಮ್ಮಿಂದ ಅಗಲಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂದು ಬೆಳಿಗ್ಗೆ ಅವರಿಗೆ ತೀವ್ರ ಹೃದಯಾ ಘಾತವಾಗಿ ಅವರನ್ನು ಸಯಾನ್ ಆಸ್ಪತ್ರೆಗೆ ಸೇರಿಸಲಾಯಿತು. ಆದರೆ ಅಲ್ಲಿನ ವೈದ್ಯರುಗಳ ಪ್ರಯತ್ನಗಳು ಸಂಪತ್‌ರರನ್ನು ಉಳಿಸುವುದರಲ್ಲಿ ಯಶಸ್ವಿ ಯಾಗಲಿಲ್ಲ. 79 ವಯಸ್ಸಿನ ಸಂಪತ್ ಅವರು ತಮ್ಮ ಪತ್ನಿ ಮತ್ತು ಪುತ್ರನನ್ನು ಬಿಟ್ಟು ಅಗಲಿದ್ದಾರೆ.

ಬೆಂಗಳೂರಿನವರಾದ ಸಂಪತ್, ಅಲ್ಲಿನ S.J. Polytechnic ನಲ್ಲಿ ಸಿನೆಮಾಟೋಗ್ರಫಿ ಕೋರ್ಸನ್ನು ಪ್ರಥಮ ಬ್ಯಾಚಿನಲ್ಲಿ ಪಾಸ್ ಮಾಡಿದವರು. ಪ್ರಾಕ್ಟಿಕಲ್ ಟ್ರೈನಿಂಗಿಗಾಗಿ ಇವರು ತಮ್ಮ ಬ್ಯಾಚಿನಲ್ಲಿ ಓದಿದ ವಿ. ಕೆ. ಮೂರ್ತಿ, ಪುಟ್ಟಣ್ಣಯ್ಯ, ಲಕ್ಷ್ಮೀರಮೇಶ್ ಇವರುಗಳೊಡನೆ 40ರ ದಶಕದಲ್ಲಿ ಮುಂಬೈಗೆ ಬಂದರು. ಟ್ರೈನಿಂಗ್ ಆದ ನಂತರ ಇವರೆಲ್ಲರೂ ಮುಂಬೈನ ಸಿನೆಮಾ ಜಗತ್ತಿನಲ್ಲಿ ಕೆಲಸ ಹುಡುಕುತ್ತಾ ಮುಂಬೈಯಲ್ಲೇ ಉಳಿದರು. ಆ ದಿನಗಳಲ್ಲಿ ಇವರಿಗೂ ಅಸೋಸಿಯೇಷನ್ನಿಗೂ ಬಹಳ ನಿಕಟ ಸಂಬಂಧ. ಎಲ್ಲಕ್ಕೂ ಅಸೋಸಿಯೇಷನ್ನೇ ಆಸರೆ. ಅಸೋಸಿಯೇಶನ್ನಿನಲ್ಲಿ ಆಟ, ಪಾಟ ಮತ್ತು ಏನೇ ಆದರೂ ಅದರಲ್ಲಿ ಭಾಗವಹಿಸುವುದು. ಮೂರುಹೊತ್ತೂ ಅಸೋಸಿಯೇಷನ್ನಿನಲ್ಲೇ. ಅಲ್ಲೇ ಇದ್ದರು ಎಂದರೂ ತಪ್ಪಾಗ್ತಾ ಇರಲ್ಲಿಲ್ಲ.

ಸಂಪತ್ ಕಳೆದ 5 ದಶಕಗಳಲ್ಲಿ ಅನೇಕ ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ವಿ.ಕೆ. ಮೂರ್ತಿ, ದ್ವಾರಕ ದಿವೇಚ, ವೈಕುಂಠ್ ಇತ್ಯಾದಿ ಹೆಸರಾಂತ ಛಾಯಾಗ್ರಾಹಕರೊಂದಿಗೂ- ಮತ್ತು ಬಿಮಲ್ ರಾಯ್, ರಮೇಶ್ ಸಿಪ್ಪಿ, ಮೋಹನ್ ಸೆಹ್ಗಾಲ್, ಮನಮೋಹನ್ ದೇಸಾಯಿ, ಪ್ರಮೋದ್ ಚಕ್ರವರ್ತಿ, ಗುಲ್ಜಾರ್ ಇತ್ಯಾದಿ ಅನೇಕ ಖ್ಯಾತ ನಿರ್ದೇಶಕರೊಂದಿಗೂ ಇವರು ಕೆಲಸ ಮಾಡಿದ್ದಾರೆ. ಇವರ ಚಿತ್ರಗಳಲ್ಲಿ ಮಧುಮತಿ, ಡಾ. ವಿದ್ಯಾ, ಅಪ್ನೆ ಹಾಥ್ ಜಗನ್ನಾಥ್, ರೋಟಿ, ಕೂಲಿ, ಸೂರಜ್, ಲವ್ ಇನ್ ಟೋಕ್ಯೋ, ಜುಗ್ನೂ, ಸೀತಾ ದೌರ್ ಗೀತಾ ಇತ್ಯಾದಿ ಜನಪ್ರಿಯವಾದವು.

ಸಂಪತ್ ಅವರು ಗುಲ್ಜಾರಿನೊಡನೆ ಹೆಚ್ಚಿಗೆ ಕೆಲಸ ಮಾಡಿದ ಕಾರಣ ಎಲ್ಲರಿಗೂ ಗುಲ್ಜಾರ್ ಅವರ ಕ್ಯಾಮರ ಮ್ಯಾನ್ ಎಂದೇ ಪರಿಚಿತರಾಗಿದ್ದರು. ವೈಕುಂಠ್ ಅವರೊಡನೆ ಪ್ರಾರಂಭದಲ್ಲಿ ಕೆಲಸ ಮಾಡಿದ ಸಂಪತ್ ನಂತರ ಗುಲ್ಜಾರ್‌ರವರ ಚಿತ್ರಗಳಲ್ಲಿ ಡೈರೆಕ್ಟರ್ ಆಫ್ ಫೋಟೊಗ್ರಫಿ ಆದರು. ಗುಲ್ಜಾರ್‌ರೊಡನೆ ಇವರು ಕೆಲಸಮಾಡಿದ ಚಿತ್ರಗಳಲ್ಲಿ ಮೇರೆ ಅಪ್ನೆ, ಅಚಾನಕ್, ಕೋಶೀಶ್, ಪರಿಚಯ್, ಆಂಧಿ, ಮೀರಾ, ಕಿತಾಬ್, ಕಿನಾರ, ಕುಶ್ಬೂ, ನಮ್ಕೀನ್ ಇತ್ಯಾದಿ ಜನಪ್ರಿಯವಾದವು.

ಸಂಪತ್ ಅವರ ಅಗಲಿಕೆಯಿಂದ ಅಸೋಸಿಯೇಷನ್ನಿನ ಹಿಂದಿನ ಪೀಳಿಗೆಯ ಸದಸ್ಯರಲ್ಲಿ ಮತ್ತೊಬ್ಬರು ನಮ್ಮಿಂದ ದೂರವಾಗಿದ್ದಾರೆ.

ಅವರ ಸಂಸಾರಕ್ಕೆ 'ನೇಸರು'ವಿನ ಸಂತಾಪಗಳು.

# सुभाषितानि SUBHAASHITAANI
## Words of Wisdom

धैर्यं यस्य पिता क्षमा च जननी शान्तिश्चिरं गेहिनी
सत्यं सूनुरयं दया च भगिनी भ्राता मनः संयमः।
शय्या भूमितलं दिशोपि वसनं ज्ञानामृतं भोजनम्
एते यस्य कुटुम्बिनो वद सखे कस्मादभयं योगिनः ।।

Dhairyam yasya pita kshama cha janaee saanthischiram gehinee
satyam soonurayam daya cha bhaginee
Bharata mahah samyamah
shayya bhoomitalam disopi vasanam
Dnyaanaamrutam bhojanam
Ete yasya kutubino vada sakhe
kasmaad bhayam yoginah

Who does the yogi have to fear-the yogi who has as his family members the following: courage for his father, forgiveness as his mother, peace as his wife, honesty as his son, compassion as his sister, self control as his brothers, the surface of the earth as his bed, the direction as his clothes, the nectar of his knowledge for food.

पत्रं नैव यदा करीरविटपे दोषो वसन्तस्य किम
नो लूकोप्यवलोकते यदि दिवा सूर्यस्य किं दूषणम्।
धारा नैव पतन्ति चातकमुखे मेघस्य किं दूषणम्
यत् पूर्वं विधिना ललाटलिखितं तन्मार्जितुं कः क्षमः।।

Patram naiva yadaa kareera vitape
dosho vasntasya kim
no lookopyavlokate yadi divaa
sooryasya kim dooshnam
Dharaa naiva patanti chaataka mukhe
meghasya kim dooshanam
yat poorvam vidhinaa lalaatalikhitam
Tanmarjitum kah kshamah

If a kareera tree has no leaves, how can spring season be blamed for it, if an owl cannot see during day time how is the sun to be blamed for it, if rain drops do not fall into the mouth of the chataka bird how are the clouds to be blamed? whatever is pre destined, nobody can wipe it away they are.

व्याघ्रीव तिष्ठति जरा परितर्जयन्ती
रोगाश्च शत्रव इव प्रहरन्ति देहम्।
आयुः परिस्रवति भिन्न घटादिवाम्भो
लोकस्तथाप्य हितमाचरतीव चित्रम्।।

Vyaaghreeva tishthati jaraa paritarjayanti
Rogascha satrava iva praharantu deham
Aayuh parisravati bhinnaghatodivambho
Lokastathaapyahitamaacharateeva chitram

Old age sits frightening one like a tigress, diseases attak one's body like enmies, duration of life is dripping away like water from a broken pot. Yet it is so surprising that people indulge in activities that are harmful to others.

भोगे रोगभयं कुले च्युतिभयं वित्ते नृपालाद भयम्
माने दैन्यभयं बले रिपुभयं रुपे जराया भयम्।।
शास्त्रे वादिभयं गुणे खलभयं काये कृतान्तात भयम्
सर्वं वस्तु भयान्वितं भुविनृणां वैराग्यमेवा भयम्।।

Bhoge rogbhayam kule chyuti bhayam vitte nrupaalaat bhayam
maane dainyabhayam bale ripu bhayam
Roope jaraayaa bhayam
Saastre vaadi bhayam gune khala bhayam
Kaaye krutaantaat bhayam
Sarvam vastu bhayanvitam bhuvi nrunaam
Vairaagyamevaabhayam

Indulgenee in pleasure is accompamed by fear of disease, statue by fear of falling from it, wealth by fear from rulers, honour by fear of facing humility, the valourous have fear from the enemy, good looks fear old age, knowledge has fear from the learned (i.e. the ones who know more) Virtues are scared of the wicked, the body fears death. Every thing in this world is accompanied by fear of something. The only state of fearlessness lies in detachment.

अर्थमनर्थं भावय नित्यम
नास्ति ततस्सुखलेशस्सत्यम।
पुत्रादपि धन भाजां भीतिः
सर्वत्रैषा विहिता रीतिः।।

Arthamanartham bhavaya nityam
Naasti tatas sukha lesa satyam
putraadapi dhanabhajaam bhee tih
Sarvatraishaa vihitaa reetih.

Wealth indeed leads to misery. You will not get even an iota of happiness through it. Even their own sons became a source of fear for the wealthy. This indeed is the way of the world.

चित्ते प्रसन्ने भुवनं प्रसन्नं
चित्ते विषण्णे भुवनं विषण्णम्।
अतोभिलाषो यदि ते सुखे स्याद
चित्तप्रसादे प्रथमं यतस्व।।

Chitte Prasanne bhuvanam prasannam
Chitte vishanne bhuvanam vishannam
Atobhilaasho yadi te sukhe syaad
chittaprasaade prathanam yatasva

If one's mind is happy, the world looks happy, if one's mind in unhappy, the world too become unhappy, so if one desires to be happy, he must first try to keep his mind happy. This only states that happiness is a state of the mind. It does not come from external sources.

*Compiled by* ***Mrs. Janaki S. Mani***
*Mumbai*

## ಜಗಜ್ಯೋತಿ ಕಲಾ ವೃಂದದ 2005 ರ ಪ್ರಶಸ್ತಿ ಘೋಷಣೆ

ಜಗಜ್ಯೋತಿ ಕಲಾವೃಂದ ಮುಂಬಯಿ ಇವರು ಕಳೆದ ಒಂಭತ್ತು ವರ್ಷಗಳಿಂದ ಅಖಿಲ ಭಾರತ ಮಟ್ಟದಲ್ಲಿ ಮಹಿಳೆಯರಿಗಾಗಿಯೇ ನಡೆಸಿಕೊಂಡು ಬರುತ್ತಿರುವ ಸಾಹಿತ್ಯ ಸ್ಪರ್ಧೆಯನ್ನು ಈ ಬಾರಿ ಕೂಡ ಮಾಡುತ್ತಿರುವ "ಶ್ರೀಮತಿ ಸುಶೀಲ ಎಸ್. ಶೆಟ್ಟಿ ಸ್ಮಾರಕ ಕಥಾ ಪ್ರಶಸ್ತಿ-2005" ಈ ಬಾರಿ ಶಿವಮೊಗ್ಗದ ಗೃಹಿಣಿ ಖ್ಯಾತ ಕಥೆಗಾರ್ತಿ ಶ್ರೀಮತಿ ಎ.ಎಸ್. ಗೀತಾ ಕುಬೇರಪ್ಪ ಇವರ "ಕಾಡುವ ಭೂತಗಳಲ್ಲೂ ಬೆಸೆದ ವರ್ತಮಾನ" ಕಥಾ ಸಂಕಲನಕ್ಕೂ "ಶ್ರೀಮತಿ ಸುಶೀಲ ಎಸ್. ಶೆಟ್ಟಿ ಸ್ಮಾರಕ ಕಾವ್ಯ ಪ್ರಶಸ್ತಿ-2005 ಕಾಸರಗೋಡಿನ ಪ್ರಸಿದ್ಧ ಕವಯಿತ್ರಿ, ವಿಮರ್ಶಕಿ ಡಾ. ಮಹೇಶ್ವರಿ ಯು. ಇವರ "ಧರೆಯು ಗುರುವದಿ ಮರೆಯಲಿ" ಕವನ ಸಂಕಲನಕ್ಕೂ ದೊರೆತಿದೆ.

ಶ್ರೀಮತಿ ಎ. ಎಸ್. ಗೀತಾ ಕುಬೇರಪ್ಪ ಮೂಲತಃ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಅರಸವಳ್ಳಿ ಗ್ರಾಮದವರು. ಬಾಲ್ಯದ ಶಿಕ್ಷಣವನ್ನು ಹುಟ್ಟೂರಿನಲ್ಲಿಯೂ, ಪ್ರೌಢ ಶಿಕ್ಷಣವನ್ನು ಶೃಂಗೇರಿಯಲ್ಲಿಯೂ, ಶ್ರೀ ಜೆ.ಸಿ.ಬಿ.ಎಂ. ಮಹಾವಿದ್ಯಾಲಯ ಶೃಂಗೇರಿ ಇಲ್ಲಿ ಬಿ.ಕಾಂ. ಪದವಿಯನ್ನು ಮುಗಿಸಿರುವ ಗೀತಾ ಕುಬೇರಪ್ಪ ಶಿಕ್ಷಣದ ಅವಧಿಯಲ್ಲಿಯೇ ಸಾಹಿತ್ಯ ಅಧ್ಯಯನ, ವಿಮರ್ಶೆ, ಚರ್ಚಾಸ್ಪರ್ಧೆ ಮತ್ತು ಬರವಣಿಗೆಯಲ್ಲಿ ಅಭಿರುಚಿ ಬೆಳೆಸಿಕೊಂಡು ಅಧ್ಯಾಪಕರ ಮೆಚ್ಚುಗೆಗೆ ಪಾತ್ರರಾಗಿದ್ದರು. ಗೃಹಿಣಿಯಾಗಿಯೂ ಸಾಹಿತ್ಯಾಸಕ್ತಿಯನ್ನು ಮುಂದುವರಿಸಿದ ಗೀತಾರವರ ಸಣ್ಣ ಕಥೆಗಳು, ವಿಮರ್ಶೆಗಳು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಥಾ ಸ್ಪರ್ಧೆಗಳಲ್ಲಿ ಭಾಗವಹಿಸಿದ ಇವರು ಹಲವಾರು ಪ್ರಶಸ್ತಿಗಳನ್ನು ಬಹುಮಾನಗಳನ್ನು ಗಳಿಸಿದ್ದಾರೆ. ಪ್ರಜಾವಾಣಿ, ಬೆಂಗಳೂರಿನ ಭಾರತೀಯ ಕರ್ನಾಟಕ ಸಂಘ, ಭೂಮಿಕೆ ದೀಪಾವಳಿ, ಸಾಹಿತ್ಯಸ್ಪರ್ಧೆ -2004, ಕಲಾ ಸಾಹಿತ್ಯ ವೇದಿಕೆ ಇವರು ನಡೆಸಿದ ಸ್ಪರ್ಧೆಗಳಲ್ಲಿ ಹಾಗೂ ಮುಂಬಯಿಯ ಬಿಲ್ಲವರ ಎಸೋಸಿಯೇಶನ್‌ನವರ ಅಕ್ಷಯ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಶ್ರೇಯ ಗೀತಾ ಕುಬೇರಪ್ಪನವರಿಗೆ ಸಲ್ಲುತ್ತದೆ. ಶ್ರೀಮತಿ ಗೀತಾ ಕುಬೇರಪ್ಪನವರಿಗೆ ಜಗಜ್ಯೋತಿ ಕಲಾ ವೃಂದದ ಪರವಾಗಿ ಹಾರ್ದಿಕ ಅಭಿನಂದನೆಗಳು.

''ಶ್ರೀಮತಿ ಸುಶೀಲ ಎಸ್. ಶೆಟ್ಟಿ ಸ್ಮಾರಕ ಕಾವ್ಯ ಪ್ರಶಸ್ತಿ-2005'' ವಿಜೇತೆಯಾದ ಡಾ. ಮಹೇಶ್ವರಿ ಯು. ಕಾಸರಗೋಡಿನ ಸರಕಾರಿ ಕಾಲೇಜಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ ದುಡಿಯುತ್ತಿದ್ದಾರೆ. ಎಂ.ಎ. (ಕನ್ನಡ) ಹಾಗೂ ಎಂ.ಎ. (ಇಂಗ್ಲಿಷ್) ಪದವೀಧರೆಯಾಗಿರುವ ಡಾ. ಮಹೇಶ್ವರಿಯವರು ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. 'ಮುಗಿಲ ಹಕ್ಕಿ' ಕವನ ಸಂಕಲನ, ಇದು ಮಾನುಷಿಯ ಓದು (ವಿಮರ್ಶೆ) ಹಾಗೂ ಮಧುರವೇ ಕಾರಣ (ಲೇಖನ ಸಂಕಲನ) ಕೃತಿಗಳನ್ನು ಪ್ರಕಟಿಸಿರುವ ಡಾ. ಮಹೇಶ್ವರಿ ಯು. ಇವರ 'ಮುಗಿಲ ಹಕ್ಕಿ'ಗೆ ವಾರಂಬಳ್ಳಿ ಪ್ರತಿಷ್ಠಾನ ಪ್ರಶಸ್ತಿ ಹಾಗೂ ಇದು ಮಾನುಷಿಯ ಓದು ಕೃತಿಗೆ ಇನಾಂದಾರ್ ಪ್ರಶಸ್ತಿಗಳು ಲಭಿಸಿವೆ. ಇದೀಗ 'ಧರೆಯ ಗುರುವದಿ ಮರೆಯಲಿ' ಕೃತಿಗೆ ಪ್ರಶಸ್ತಿ ಪಡೆದ ಡಾ. ಮಹೇಶ್ವರಿಯವರಿಗೆ ಹಾರ್ದಿಕ ಅಭಿನಂದನೆಗಳು.

ಪ್ರಶಸ್ತಿ ಪ್ರಧಾನ ಸಮಾರಂಭವು ದಿನಾಂಕ 12-2-2006ನೇ ರವಿವಾರ ಅಪರಾಹ್ನ 2.00 ಗಂಟೆಗೆ ಡಾ. ವಿಶ್ವೇಶ್ವರಯ್ಯ ಸ್ಮಾರಕ ಸಭಾಗೃಹದಲ್ಲಿ ನೆರವೇರಲಿರುವುದು.

## ಶ್ರೇಷ್ಠ ದಿಲ್ಲಿ ಕನ್ನಡಿಗ ಪ್ರಶಸ್ತಿಗೆ ಕೆ.ಆರ್. ನಾಗರಾಜ ಆಯ್ಕೆ

ದಿಲ್ಲಿಯಲ್ಲಿ ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್‌ರೂ, ಸುಪ್ರೀಂಕೋರ್ಟಿನ ಹಿರಿಯ ನ್ಯಾಯವಾದಿಗಳೂ, ದಿಲ್ಲಿಯ ಕನ್ನಡ ಪೋಷಕರೂ ಆಗಿದ್ದ ದಿವಂಗತ ಕೆ.ಆರ್. ನಾಗರಾಜ ಅವರು 'ದೆಹಲಿ ಕನ್ನಡಿಗ' ಪತ್ರಿಕೆ ಸ್ಥಾಪಿಸಿರುವ ಈ ಸಾಲಿನ ಪ್ರತಿಷ್ಠಿತ ಶ್ರೇಷ್ಠ ದಿಲ್ಲಿ ಕನ್ನಡಿಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ದೆಹಲಿ ಕನ್ನಡಿಗ'ನ ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಈ ಆಯ್ಕೆಯನ್ನು ಇಲ್ಲಿ ಪ್ರಕಟಿಸಿದರು.

## ಸುತ್ತಮುತ್ತ

ಕೆ.ಆರ್. ನಾಗರಾಜ ಅವರು ಕನ್ನಡ ಸಂಸ್ಕೃತಿಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ಉನ್ನತ ತಜ್ಞರ ಸಮಿತಿ ಅವರಿಗೆ ಆಯ್ಕೆ ಮಾಡಿದೆ ಎಂದು ಸಾಮಗ ಅವರು ತಿಳಿಸಿದರು. ಪ್ರಶಸ್ತಿಯು ಶಾಲು, ಫಲಕ, ಪ್ರಶಸ್ತಿ ಪತ್ರವನ್ನೊಳಗೊಂಡಿದ್ದು ದಿಲ್ಲಿಯಲ್ಲಿ ಎಪ್ರಿಲ್ 8ರಂದು ನಡೆಯಲಿರುವ 23ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಈ ಮರಣೋತ್ತರ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.

ಈ ಸಮ್ಮೇಳನದಲ್ಲಿ ನೀಡಲಾಗುವ ಇತರ ಪ್ರಶಸ್ತಿಗಳ ಆಯ್ಕೆಯನ್ನು ಸಾಮಗ ಅವರು ಪ್ರಕಟಿಸಿದರು. ಕೇಂದ್ರ ಜಾಗೃತ ಆಯುಕ್ತರಾದ ಪಿ. ಶಂಕರ್ ಅವರು 'ಶ್ರೇಷ್ಠ ಹೊರನಾಡ ಕನ್ನಡಿಗ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್‌ನ ಅಧ್ಯಕ್ಷರೂ, ಆಡಳಿತ ನಿರ್ದೇಶಕರೂ ಆದ ಕೆ.ಎನ್. ಪ್ರಿಥ್ವಿರಾಜ್ ಅವರು ಟಿ.ಎ. ಪೈ. ಸ್ಮಾರಕ ಶ್ರೇಷ್ಠ ಬ್ಯಾಂಕರ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ವಿವಿಧ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರನ್ನು ಈ ಸಮ್ಮೇಳನದಲ್ಲೇ ಸನ್ಮಾನಿಸಲಾಗುವುದು ಎಂದು ಸಾಮಗ ಅವರು ತಿಳಿಸಿದ್ದಾರೆ.

## ಪ್ರೊ| ಸಾ.ಕೃ. ರಾಮಚಂದ್ರ ರಾವ್ ಇನ್ನಿಲ್ಲ

ಖ್ಯಾತ ಮನಃಶಾಸ್ತ್ರಜ್ಞ ಹಾಗೂ ಸಂಸ್ಕೃತ ವಿದ್ವಾನ್ ಪ್ರೊ| ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾವ್ ಫೆ. 1ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.ಕೆಲವು ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದ ಪ್ರೊ| ಎಸ್.ಕೆ. ರಾಮಚಂದ್ರ ರಾವ್ ಅವರಿಗೆ ಫೆ. 9ರಂದು 79 ವರ್ಷ ವಾಗುತ್ತಿತ್ತು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.



ಮನಃಶಾಸ್ತ್ರ ವಿಷಯದಲ್ಲಿ ಪ್ರೊಫೆಸರ್ ಆಗಿದ್ದ ರಾಮಚಂದ್ರ ರಾವ್ ಸಂಗೀತ, ಕಲೆಯಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ಅಲ್ಲದೆ ಸ್ವತಃ ಶಿಲ್ಪಿ ಚಿತ್ರಕಾರರೂ ಆಗಿದ್ದರು. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯಲ್ಲಿ ಮನಃಶಾಸ್ತ್ರ ವಿಭಾಗ ತೆರೆಯುವಲ್ಲಿ ರಾಮಚಂದ್ರ ರಾವ್ ಅವರ ಕೊಡುಗೆ ಅಪಾರ.

ಸಾಲಿಗ್ರಾಮ ಕೃಷ್ಣನಾರಾಯಣ ರಾವ್ ಹಾಗೂ ಕಮಲಾಬಾಯಿ ಅವರ ಪುತ್ರರಾಗಿ ರಾಮಚಂದ್ರ ರಾವ್ 1927 ಫೆಬ್ರವರಿ 9ರಂದು ಹಾಸನದಲ್ಲಿ ಜನಿಸಿದ್ದರು. ನಂಜನಗೂಡು ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ಶಿಕ್ಷಣ ಮುಗಿಸಿದ್ದ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿಯೇ ಸ್ನಾತಕೋತ್ತರ ಪದವಿಯನ್ನು 1948ರಲ್ಲಿ ಪೂರ್ಣಗೊಳಿಸಿದ್ದರು. ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು ನಗರದ ನಿಮ್ಹಾನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೇರಿದಂತೆ ಹಲವು ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಮನಃಶಾಸ್ತ್ರ ಮತ್ತು ಭಾರತೀಯ ತತ್ವಶಾಸ್ತ್ರ ವಿಷಯವನ್ನು ಬೋಧಿಸಿದ್ದರು. ಸಣ್ಣಕಥೆ, ಕಾದಂಬರಿ, ಮಹಾತ್ಮರ ಜೀವನ ಚಿತ್ರಣ, ದೇವಾಲಯಗಳ ಇತಿಹಾಸ, ಶಿಲ್ಪಶಾಸ್ತ್ರ, ಆಯುರ್ವೇದ, ಲಲಿತಕಲೆಗಳು, ವೇದಾಂತ-ಆಗಮ ಕೋಶಗಳು, ತರ್ಕ, ಮೀಮಾಂಸ ಸಿದ್ಧಾಂತ ವೈಚಾರಿಕ ಲೇಖನಗಳು, ವೇದಾ-ವೇದಾಂಗ ದರ್ಶನಗಳು ಸೇರಿದಂತೆ ಅನೇಕ ವಿಷಯ ಕುರಿತು ರಾಮಚಂದ್ರ ರಾವ್ ನೂರಾರು ಕೃತಿಗಳನ್ನು ರಚಿಸಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ, ಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಂಗೀತ-ನೃತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ವಿಶ್ವ ವಿದ್ಯಾನಿಲಯದ ಗೌರವ ಡಾಕ್ಟರೇಟ್ ಅಲ್ಲದೆ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಇವರು ಪಾತ್ರರಾಗಿದ್ದರು. ಸಾ.ಕೃ. ರಾಮಚಂದ್ರರಾಯರು ಕೆಲವು ವರ್ಷಗಳ ಹಿಂದೆ ಅಸೋಸಿಯೇಶನ್‌ನಲ್ಲಿ ಸುವರ್ಣ ಮಹೋತ್ಸವ ಹಸ್ತಿ ಉಪನ್ಯಾಸವನ್ನು ನೀಡಿದನ್ನು ಸದಸ್ಯರು ಮರೆತಿರಲಾರರು.

ಅಸೋಸಿಯೇಶನ್ ನೇಸರುವಿನ ಮೂಲಕ ಅಗಲಿದ ಆತ್ಮೀಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಒಳ್ಳೆಯ ಮನಸ್ಸನ್ನು ಸೃಷ್ಟಿಸುವ ಶಕ್ತಿ ಸಂಗೀತಕ್ಕೆ ಇದೆ - ಮ.ಗು. ಸದಾನಂದಯ್ಯ

"ಭಕ್ತಿರಸ ಪ್ರಧಾನವಾದ ಕರ್ನಾಟಕ ಸಂಗೀತಕ್ಕೆ ಕೆಟ್ಟ ಮನಸ್ಸುಗಳನ್ನು ಕಿತ್ತು ಹಾಕಿ ಒಳ್ಳೆಯ ಮನಸ್ಸನ್ನು ಸೃಷ್ಟಿಸುವ ಶಕ್ತಿ ಇದೆ" ಎಂದು ಕರ್ನಾಟಕ ಸರ್ಕಾರ ರಂಗಾಯಣ ಉಪ ನಿರ್ದೇಶಕರಾದ ಮ.ಗು. ಸದಾನಂದಯ್ಯ ತಿಳಿಸಿದರು. ಅವರು ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದವರು ಏರ್ಪಡಿಸಿದ್ದ ಶ್ರೀ ಪುರಂದರ ದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನಾ ಉತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರು ಮುಂದುವರೆದು ಸಂಗೀತವು ಕೇವಲ ಮನರಂಜನೆಯಲ್ಲಿ, ಅದು ಮನಸ್ಸನ್ನು ಶಾಂತಗೊಳಿಸುತ್ತದೆ, ಬದುಕನ್ನು ಚಲಿಸುತ್ತದೆ, ಸಮಾಜ ಸುಧಾರಣೆಗೆ ಸಂಗೀತ ಸಹಕಾರಿಯಾಗಿದೆ ಎಂದು ತಿಳಿಸಿ ಪೋಷಕರು ತಮ್ಮ ಮಕ್ಕಳಿಗೆ ಕೇವಲ ಮಾಮೂಲು ವಿದ್ಯಾಭ್ಯಾಸಕ್ಕೆ ಒತ್ತು ಕೊಡದೆ ಲಲಿತ ಕಲೆಗಳ ಕಡೆಗೂ ಗಮನ ಹರಿಸಲು ಅವಕಾಶ ಕೊಟ್ಟರೆ ಮುಂದೆ ಅವರು ತಮ್ಮ ಬಾಳ್ವೆಯನ್ನು ಉತ್ಕೃಷ್ಟವಾಗಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಅಂದು ನಡೆದ ಸಂಗೀತ ಕಾರ್ಯಕ್ರಮದಲ್ಲಿ 4 ವರ್ಷದ ಮಕ್ಕಳು, 60 ವರ್ಷದವರೂ ಹಂತ ಹಂತವಾಗಿ ಭಾಗವಹಿಸಿದುದರ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿ, ವಿದ್ಯಾಲಯದ ಚಟುವಟಿಕೆಗಳನ್ನು ಪ್ರಶಂಸಿಸಿ ಮಕ್ಕಳಿಗೆ ಉತ್ತಮ ಸಂಸ್ಕೃತಿಯನ್ನು ಕೊಡುತ್ತಿರುವ ನಾಗಭೂಷಣ್ ದಂಪತಿಗಳು ಅಭಿನಂದನಾರ್ಹರು ಎಂದು ತಿಳಿಸಿದರು.

ಆರಂಭದಲ್ಲಿ ವಿದ್ಯಾಲಯದ ಪ್ರಾಂಶುಪಾಲೆ ಉಮಾ ನಾಗಭೂಷಣ್ ಎಲ್ಲರನ್ನು ಸ್ವಾಗತಿಸಿದರು. ಶ್ರೀಮತಿ ಆನಂದ ಲಕ್ಷ್ಮಿ ಅತಿಥಿಗಳನ್ನು ಪರಿಚಯಿಸಿದರು. ಕುಮಾರಿ ಸುಶೀಲಾ ರಾವ್ ವಿದ್ಯಾಲಯದ ವರದಿಯನ್ನು ಮಂಡಿಸಿದರು. ಕರ್ನಾಟಕ ಸರ್ಕಾರದ ಸಂಗೀತ ಪರೀಕ್ಷೆಯಲ್ಲಿ ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾದ ಕುಮಾರಿ ದರ್ಶನ ಅಯ್ಯರ್‌ಗೆ ಸರ್ಕಾರದಿಂದ ಬಂದಿದ್ದ ಅರ್ಹತಾ ಪತ್ರವನ್ನು ಅತಿಥಿಗಳು ವಿತರಿಸಿದರು. ಅರ್ಹ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ವಿತರಿಸಲಾಯಿತು. ಉತ್ಸವಕ್ಕೆ ಪ್ರಾಯೋಜಕರುಗಳಾಗಿ ಸಹಕರಿಸಿದ ದಾನಿಗಳಿಗೆ ಸ್ಮರಣಿಕೆಯನ್ನಿತ್ತು ಸತ್ಕರಿಸಲಾಯಿತು. ಶ್ರೀ ನಾಗಭೂಷಣ್ ವಂದಿಸಿದರು. ಚಿತ್ರ ಕಾರ್ಯ ನಿರ್ವಹಣೆ ಮಾಡಿದರು.



ಜನವರಿ 7ರಂದು ಎನ್.ಕೆ.ಇ.ಎಸ್. ಶಾಲೆಯಲ್ಲಿ ದೃಶ್ಯ ಶ್ರಾವ್ಯ ಕಲಿಕಾ ಸೌಲಭ್ಯದ ಉದ್ಘಾಟನೆ ಮಹಾರಾಷ್ಟ್ರದ ರಾಜ್ಯಪಾಲ ಶ್ರೀ ಎಸ್. ಎಂ. ಕೃಷ್ಣ ಅವರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಕೃಷ್ಣ ಅವರಿಂದ



ಅಸೋಸಿಯೇಶನ್‌ನಲ್ಲಿ ಮಾಘಿ ಗಣಪತಿ ಪೂಜೆ ಫೆಬ್ರುವರಿ 1ರಂದು ಶ್ರೀಮತಿ ಪುಷ್ಪಾ ಮತ್ತು ಶ್ರೀ ರಘುನಾಥ್ ರಾವ್ ದಂಪತಿಗಳು.

## ಅಕ್ಷತಾ ಅಕ್ಷತಾ

ಹುಡುಗರಿಗೆ ಅಚ್ಚು ಮೆಚ್ಚು,
ಹುಡುಗಿಯರಿಗೆ ಹೊಟ್ಟೆಕಿಚ್ಚು,
ಉಡುಗೆ ತೊಡುಗೆ ಅಚ್ಚು ಕಟ್ಟು
ನಡಿಗೆಯಲ್ಲಿ ಹುಡುಗಿಯಲ್ಲ
ನವಿಲು ನಮ್ಮ ಅಕ್ಷತಾ !

ಕಾಲೇಜಿನ ಗೋಡೆಯಲ್ಲಿ
ಬೆಂಚಿನಲ್ಲಿ ಡೆಸ್ಕಿನಲ್ಲಿ
ಎಲ್ಲಿ ಎಲ್ಲಿ ನೋಡಿದರೂ
ಅಲ್ಲಿ ಅದೇ ಅಕ್ಷತಾ
ಐ ಲವ್ ಯೂ ಅಕ್ಷತಾ !
ಪಡ್ಡೆ ಹುಡುಗರೆದೆಯಲ್ಲಿ
ಅಚ್ಚೊತ್ತಿದ ಅಕ್ಷತಾ
ಮಾಸ್ತರುಗಳ ನಾಲಿಗೆ ತುದಿ
ಪದಕಗಳ ಯಾದಿಯಲ್ಲಿ,
ಮೊದಲ ಹೆಸರು ಅಕ್ಷತಾ.

ಪಾಠದಲ್ಲಿ ಮಾತ್ರವಲ್ಲ
ಆಟದಲ್ಲೂ ಮುಂದೆ,
ಅರಳು ಹುರಿದ ಹಾಗೆ ಚರ್ಚೆ-
ಮಾಡಿ ಮೋಡಿಗೊಳಿಸುತ,
ಬಹುಮಾನ ಗಿಟ್ಟಿಸುವ
ದಿಟ್ಟ ಹುಡುಗಿ ಅಕ್ಷತಾ.

'ಯಯಾತಿ'ಯ ದೇವಯಾನಿ
'ಹಯವದನ'ದ ಪದ್ಮಿನಿ
ಶಕುಂತಲೆಯ ಪಾತ್ರದಲಿ
ಮಿಂಚಿದವಳು ಅಕ್ಷತಾ
ಭರತನಾಟ್ಯ, ಸಂಗೀತ
ಕಲಿತ ಜಾಣೆ ಅಕ್ಷತಾ.

ಕಾಲೇಜಿನ ಮೂರು ವರ್ಷ
ವರ್ಷವಲ್ಲ ದಿನಗಳಂತೆ
ಕಳೆದು ಈಗ ಹೆತ್ತವರಿಗೆ
ಅಕ್ಷತಾಳ ಮದುವೆ ಚಿಂತೆ
ಬೆಳೆದು ನಿಂತ ಮೂವರಲ್ಲಿ
ಮೊದಲಿನವಳೆ ಅಕ್ಷತಾ !

ವಧು ಪರೀಕ್ಷೆ ತಂದದೆದುರು
ಗೊಂಬೆಯಂತೆ ಕೂರುತಾ
ಅವರು ಕಾಫಿ ಹೀರುವಾಗ
ಭಕ್ತಿ ಗೀತೆ ಹೀರುವಾಗ
ಕೃಷ್ಣಾ ನೀ ಬೇಗನೇ
ಬಾ ಎನ್ನುವ ಅಕ್ಷತಾ !

ಅದೇ ದೃಶ್ಯ ಮತ್ತೆ ಮತ್ತೆ
ಅಭಿನಯಿಸುವ ಅಕ್ಷತಾ
ಗೊತ್ತಿಲ್ಲವೆ ಇವಳಿಗೆ
ಗಂಡುಗಳ ಇಂಗಿತ?
ಎಲ್ಲರದ್ದೂ ಒಂದೆ ಸೊಲ್ಲು
ಅಕ್ಷತಾ, ಅಕ್ಷತಾ,
ಲಕ್ಷ ತಾ, ಲಕ್ಷ ತಾ !

- ಎಚ್. ಡುಂಡಿರಾಜ್

# MARRIAGE BUREAU - ವಧು-ವರ ಸೂಚಕ
# REAL ESTATE

ಎಲ್ಲಾ ಜಾತಿ, ವಿಳಂಬಿತ, ಪುನರ್‌ವಿವಾಹಗಳಿಗಾಗಿ ವಿಚಾರಿಸಿರಿ.
ಹಾಗೂ ಅಂಗವಿಕಲರಿಗೆ ಉಚಿತ ಸೇವೆ.
ಹೋಟೇಲ್, ಸ್ಟೋರ್, ಪರ್ಮಿಟ್ ರೂಮ್,
ವೆಜ್ ರೆಸ್ಟೋರೆಂಟ್, ಫ್ಲಾಟ್, ಶಾಪ್ ಹಾಗೂ ಯಾವುದೇ ತರದ
ಆಸ್ತಿಗಳನ್ನು ಮಾರುವವರು ಹಾಗೂ ಕೊಳ್ಳುವವರು ಸಂಪರ್ಕಿಸಿರಿ.

**Match making for all castes/communities, late marriages, re-marriages etc.**
**Free match making service provided for handicapped. For Buying and Selling of Hotels, Stores, Permit-room, Veg. Restaurants, Plots, shops and Flats, and any kind of properties.**

*Contact* : Mr. Ratnakar Shetty

Chandrodaya Bldg.,
R.No. 3, Grd. Floor, Next to Venu Guest House,
Tata Mill Compound, Near Parel Railway Station,
Parel (East), Mumbai-400 012.

Tel.: **24186829** (M) **9892462525**

**Website : www.ratnakarshetty.com**

MH/MR/ME/093/06-08
Date of Posting : 10-02-2006

ಪ್ರಜಾಪ್ರಭುತ್ವ ಕೇವಲ ಸರ್ಕಾರದ ಒಂದು ವ್ಯವಸ್ಥೆಯಲ್ಲ. ಅದು ಮೂಲತಃ ಸಹ ಜೀವನ ಶೈಲಿ ಮತ್ತು ಪರಸ್ಪರ ಸಂಪರ್ಕದಿಂದೊಡಗೂಡಿದ ಅನುಭವ ಮೇಲಾಗಿ ನಮ್ಮ ಸೋದರ ಬಂಧುಗಳಿಗೆ ನಾವು ತೋರಿಸುವ ಗೌರವ ಮತ್ತು ಪೂಜ್ಯ ಭಾವನೆಯ ಪ್ರತೀಕ.

- ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್

ಸಾರ್ವಭೌಮ ಭಾರತ ಗಣರಾಜ್ಯದಲ್ಲಿ

# ಸುವರ್ಣ ಕರ್ನಾಟಕ

## 57ನೇ ಗಣರಾಜ್ಯೋತ್ಸವದ ಶುಭಾಶಯಗಳು

ಇಂದು ಭಾರತ ಜಗತ್ತಿನಲ್ಲೇ ಬೃಹತ್ ಸಾರ್ವಭೌಮ, ಪ್ರಜಾತಂತ್ರ, ಜಾತ್ಯಾತೀತ ಸ್ವತಂತ್ರ ಗಣರಾಜ್ಯವೆಂಬ ಹೆಮ್ಮೆ ನಮ್ಮೆಲ್ಲರದು. ವಿಶ್ವದಲ್ಲೇ ಅತ್ಯುತ್ತಮ ಸಂವಿಧಾನವನ್ನು ರಚಿಸಿಕೊಟ್ಟ ರಾಷ್ಟ್ರ ನಿರ್ಮಾತೃಗಳ ಪರಿಶ್ರಮವೇ ಈ ಹೆಗ್ಗಳಿಕೆಗೆ ಕಾರಣ.

ದೇಶದಲ್ಲಿ ಪ್ರಜಾಪ್ರಭುತ್ವ ಪ್ರಬಲವಾಗಿರುವಂತೆ ಎಚ್ಚರಿಕೆ ವಹಿಸಿದ ಅವರು ಅಭಿವೃದ್ಧಿ ಪಥದಲ್ಲಿ ಜಾತಿ, ಮತ, ಧರ್ಮ ಲಿಂಗಗಳ ಹೆಸರಿನಲ್ಲಿ ತಾರತಮ್ಯಕ್ಕೆ ಎಡೆ ಮಾಡಿಕೊಡಲಿಲ್ಲ.

ರಾಷ್ಟ್ರದ ಸಮಗ್ರತೆ ಮತ್ತು ಸರ್ವತೋಮುಖ ಅಭಿವೃದ್ಧಿ ಕುರಿತು ಅವರ ದೂರದೃಷ್ಟಿ, ಧೋರಣೆಗಳಿಂದಾಗಿ ನಾವೆಲ್ಲರೂ ಭಾವೈಕ್ಯತೆಯಿಂದ ಪ್ರಗತಿಯ ಉತ್ತುಂಗದತ್ತ ಸಾಗುತ್ತಿರುವೆವು. ಈ ಮಹಾನ್ ತ್ಯಾಗಿಗಳು ನಮಗೆ ಆದರ್ಶಪ್ರಾಯಗಳು ಹಾಗೂ ಪ್ರಾತಃಸ್ಮರಣೀಯರು.

ಸಂವಿಧಾನ ನಿರ್ಮಾತೃಗಳ ಆಶಯಗಳಿಗೆ ಸ್ಪಂದಿಸುತ್ತಾ ಕರ್ನಾಟಕ ಇಂದು ಮಹಿಳಾ ಸ್ವಾವಲಂಬನೆ, ಸಾಕ್ಷರತೆ, ಅಧಿಕಾರ ವಿಕೇಂದ್ರಿಕರಣ ಮುಂತಾದ ಮಾದರಿ ಯೋಜನೆಗಳ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಗಳಂತಹ ಆಧುನಿಕ ಕ್ಷೇತ್ರಗಳ ಮುಖಾಂತರ ದೇಶದ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡುತ್ತಿದೆ.

*ಹಕ್ಕುಗಳನ್ನು ಚಲಾಯಿಸಿ, ಕರ್ತವ್ಯಗಳನ್ನು ಪರಿಪಾಲಿಸಿ*

ಇಂ

**ಕರ್ನಾಟಕ**

***KARNATAKA***

ಕರ್ನಾಟಕ ವಾರ್ತೆ

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938